ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ನೇರವಾದ ಪ್ರಶ್ನೆ ಏನೆಂದರೆ, ವೈಜ್ಞಾನಿಕ ಪ್ರಗತಿಯ ದುರುಪಯೋಗವಾಗುತ್ತಿಲ್ಲವೆ ? ಬಹಳ ವರ್ಷಗಳಿಂದ ಭಾರತೀಯ ಸಮಾಜದಲ್ಲಿ ಮೌಲ್ಯಗಳನ್ನು ಕಾಪಾಡಿಕೊಂಡು ಬರುತ್ತಿದ್ದೇವೆ. ಈ ಪ್ರಯೋಗ ಕರ್ನಾಟಕದಲ್ಲಿ ಹೊಸದಾಗಿ ಆಗುತ್ತಿದ್ದರೆ ಮುಂದು ವರಿಸಿ ಸಂಶೋಧನೆ ಮಾಡಿ. ಆದರೆ ಈ ಅಧಿಕಾರಿಯ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿರುವ ಉದ್ದೇಶವೇನೆಂದರೆ, ಆತ ಈ ಉಪಕರಣವನ್ನು ಹೊರಗಡೆ ತೆಗೆದುಕೊಂಡು ಹೋಗಿ ದುರುಪಯೋಗ ಮಾಡಿರುವ ದೃಷ್ಟಿಯಿಂದ. ಈ ಪ್ರಯೋಗದ ಕೆಟ್ಟ ಪರಿಣಾಮ ಮಹಾರಾಷ್ಟ್ರದಲ್ಲಿ ಆಗಿರುವುದರಿಂದ ಮತ್ತು ಅಲ್ಲಿ ನೂರಾರು ನರ್ಸಿಂಗ್ ಹೋಂಗಳು ದುರುಪಯೋಗ ಮಾಡಿಕೊಂಡಿದ್ದ ರಿಂದ ಕಾನೂನನ್ನು ತಂದರು. ನಾವು ಬಡ ರಾಜ್ಯದಲ್ಲಿದ್ದೇವೆ, ಬಡ ಹೆಣ್ಣು ಮಕ್ಕಳ ಬಗ್ಗೆ ನಾವು ತೀವ್ರವಾಗಿ ಆಲೋಚಿಸಬೇಕಾಗಿದೆ. ಮಲೇಷಿಯದಲ್ಲಿ ೩ ತಿಂಗಳ ಭ್ರೂಣವನ್ನು ತೆಗೆದು ಫೇಸ್ ಆಯಿಂಟ್‌ಮೆಂಟ್ ಮಾಡಿ ದುರ್ಲಾಭವನ್ನು ಪಡೆಯುತ್ತಿದ್ದಾರೆ.

ಈ ರೀತಿಯ ಕೋಟ್ಯಾಂತರ ರೂಪಾಯಿಗಳ ದಂಧೆ ಮಾಡುತ್ತಾರೆಂದು ಗೊತ್ತಾದಾಗ ನಮ್ಮ ದೇಶದಲ್ಲೂ ಬಡ ಹೆಂಗಸರು. ಮೂರು ತಿಂಗಳಾದಾಗ ಅಬಾರ್ಷನ್ ಮಾಡಿರಿಕೊಳ್ಳಿತಕ್ಕ ಕಾಲ ಬರಬಹುದು. ದಯವಾಡಿ ಈ ಒಂದು ಕೆಟ್ಟ ಪರಿಸ್ಥಿತಿಯನ್ನು ಅನುಭವಿಸುವಂಥದ್ದನ್ನು ದಯವಾಡಿ ತಡೆ ಮಾಡಬೇಕು. ಈಗ ಆಗಿರುವಂತೆ, ಇನ್ನು ಮುಂದೆ ಇದು ಹೊರಗಡೆ ಹೋಗದಂತೆ ಬಂದೋಬಸ್ತ್ ವ್ಯವಸ್ಥೆ ಆಗಬೇಕು. ಮಹಾರಾಷ್ಟ್ರದಲ್ಲಿ ಏನು ಕಾನೂನು ತಂದಿದ್ದಾರೆ, ಅದನ್ನು ತಾವು ತರಿಸಿಕೊಂಡು ಸ್ಟಡಿ ಮಾಡಿ, ಸ್ತ್ರೀ ಕುಲವನ್ನು ಉಳಿಸಬೇಕು. ಇವತ್ತು ಅನೇಕ ಜನ ಮಹಿಳಾ ಸಮಾಜವನ್ನು ನಡೆಸುತ್ತಿದ್ದಾರೆ ಬಹುಶಃ ಅವರಿಗೆ ಈ ಬಗ್ಗೆ ಕಲ್ಪನೆ ಇರಲಿಕ್ಕಿಲ್ಲ. ಅವರು ಮುಂದೆ ಒಂದು ಇದನ್ನು ಪ್ರತಿಭಟನೆ ಮಾಡಬೇಕು. ಅವರಿಗೆ ಈ ಕೆಟ್ಟ ಪರಿಣಾಮ ಗೊತ್ತಿಲ್ಲ. ಆದುದರಿಂದ ದಯವಾಡಿ, ಮಹಾರಾಷ್ಟ್ರದಲ್ಲಿ ಯಾವ ಕಾನೂನು ತಂದಿದ್ದಾರೆ ಅಂತಹ ಕಾನೂನನ್ನು ಇಲ್ಲಿಯೂ ತರಬೇಕು ಮತ್ತು ಇದರ ಬಗ್ಗೆ ತನಿಖೆಯ ವ್ಯವಸ್ಥೆ ಮಾಡಬೇಕೆಂದು ನಾನು ನೇರವಾಗಿ ಕೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಕಾಲಿಂಗ್ ಅಟೆನ್‌ಷನ್ ಮೇಲೆ ಇಷ್ಟೊಂದು ಮಾತನಾಡ ಬಾರದು, ಎನ್ನುವುದು ನನಗೆ ಗೊತ್ತು. ಆದರೂ ಈ ವಿಚಾರದಲ್ಲಿ ನನಗೂ ಸ್ವಲ್ಪ ಗೊತ್ತಿರುವುದರಿಂದ ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. ಕಾಲಿಂಗ್ ಅಟೆನ್‌ಷನ್ ಮೇಲೆ, ಬೇರೆಯವರು ಮಾತನಾಡುವು ದಕ್ಕೆ ರೂಲ್ಸ್ ಇಲ್ಲ.

ಅಧ್ಯಕ್ಷರು.—ರೂಲ್ಸ್ ಇಲ್ಲದೇ ಇದ್ದಾಗ, ನೀವು ಮಾತನಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಯಾವುದೇ ಕ್ಷೇತ್ರದಲ್ಲಿ ವೈಜ್ಞಾನಿಕ ಸಂಶೋಧನೆ ಅತ್ಯಗತ್ಯ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ಯಾವ ಕಾನೂನು ಇದೆ, ಏನು ಬಿಲ್ ತಂದಿದ್ದಾರೆ, ಅದನ್ನು ತರಿಸಿ ನೋಡುತ್ತೇವೆ ಮತ್ತು ಈ ಘಟನೆ ಬಗ್ಗೆ ಪೂರ್ಣ ತನಿಖೆ ಮಾಡಿಸು ತ್ತೇನೆ.

೨) ಸಿರಸಿ ತಾಲ್ಲೂಕಿನ ಶ್ರೀ ಅರನಿಂದ ಹೆಗಡೆ ಆರ್. ಎಫ್. ಓ. ಅವರ ಕೊಲೆಯ ಪ್ರಕರಣವನ್ನು ತನಿಖೆ ಮಾಡದಿರುವುದು.

ಶ್ರೀ ಆರ್.ಎನ್. ನಾಯಕ್ —ಮಾನ್ಯ ಅಧ್ಯಕ್ಷರೇ. ಸಿರ್ಸಿ ತಾಲ್ಲೂಕಿನ ಆರ್.ಎಫ್.ಓ, ಆಗಿ ಕೆಲಸ ಮಾಡುತ್ತಿದ್ದ ಶ್ರೀ ಅರವಿಂದ ಹೆಗಡೆ ಇವರ ಕೊಲೆಯ ಪ್ರಕರಣದ ವಿಚಾರಣೆ ಪೋಲೀಸಿನವ ರಿಂದಾಗಲೀ ಅಥವಾ ಸಿ.ಐ.ಡಿ. ಯಿಂದಾಗಲೀ ಸರಿಯಾಗಿ ನಡೆಯುತ್ತಿಲ್ಲದಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ,

ಶ್ರೀ ಜೆ.ಎಸ್. ಬಾಗಲಕೋಟಿ (ಅರಣ್ಯ ರಾಜ್ಯಸಚಿವರು). —ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ, ಈ ಕೆಳಕಂಡ ಲಿಖಿತ ಹೇಳಿಕೆಯನ್ನು ಓದುವುದಕ್ಕೆ ತಮ್ಮ ಅನುಮತಿ ಯನ್ನು ಕೋರುತ್ತೇನೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಒಂದು ನಿಮಿಷ. ಇದು ಹೋಂ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟರುತ್ತಕ್ಕ ವಿಚಾರ. ಹೋಂ ಮಿನಿಸ್ಟರು ಓದಬೇಕು ಮಾನ್ಯ ಅರಣ್ಯ ಸಚಿವರು

ಓದುವುದಿಲ್ಲ. ಮುರದ ಕಳ್ಳಸಾಗಾಣಿಕೆ ವಿಚಾರ ಬಂದಾಗ ಅವರು ಹೇಳಲಿ ಆದರೆ ಇದು ಕೊಲೆಗೆ ಸಂಬಂಧ ಪಟ್ಟ ವಿಚಾರ ಆದ್ದರಿಂದ, ಹೋಂ ಡಿಪಾರ್ಟ್‌ಮೆಂಟ್ ಮಾನ್ಯ ಮುಖ್ಯಮಂತ್ರಿಗಳ ವಶದಲ್ಲಿರುವು ದರಿಂದ, ಮುಖ್ಯ ಮಂತ್ರಿಗಳೇ ಇದನ್ನು ಓದಬೇಕು. The case is registered under Section 302 of the IPC.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ನಿಮಗೆ ಉತ್ತರ ಬೇಕೋ ಬೇಡವೋ...

ಶ್ರೀ ಎಸ್. ಬಂಗಾರಪ್ಪ,—ಯಾರ ಉತ್ತರ, The reply will have to be given by the Hon'ble Chief Minister, What is this? Hon'ble Chief Minister is holding the Home portfolio. He is expected to make the statement in this case, itis not the Forest Minister. How can you allow the Hon'ble Forest Minister to make a statement ?

MR. SPEAKER.—I have already allowed ..

SRI S.R. BOMMAI.—Technically speaking any Minister can answer on behalf of the Government...ಅರಣ್ಯ ಮತ್ತು ಹೋಂ ಎರಡಕ್ಕೂ ಸಂಬಂಧಪಟ್ಟಿರುವುದ ರಿಂದ ಹಾಗೂ ಈಗಾಗಲೇ ಅಧ್ಯಕ್ಷರು ಓದುವುದಕ್ಕೆ ಅಪ್ಪಣೆ ಕೊಟ್ಟಿರುವುದರಿಂದ, ಅವರೂ ಓದ ಬಹುದು.

ಶ್ರೀ ಎಸ್ ಬಂಗಾರಪ್ಪ.—ನಾವು ಹೋಂ ಡಿಪಾರ್ಟ್‌ಮೆಂಟ್ ಇನ್‌ವೆಸ್ಟಿಗೇಷನ್ ಬಗ್ಗೆ ಪ್ರಶ್ನೆ ಕೇಳಿದರೆ ಅವರಿಗೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ ಇನ್‌ವೆಸ್ಟಿಗೇಷನ್ ವಿಚಾರದಲ್ಲಿ ಅವರು ಹೇಗೆ ಉತ್ತರ ಕೊಡುತ್ತಾರೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅರಣ್ಯ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಬರುವುದಿಲ್ಲ ಎಂಬುದು ಸರಿಯಲ್ಲ. ನಿಯಮಗಳ ಪ್ರಕಾರ ಕನ್‌ವೆನ್‌ಷನ್ ಪ್ರಕಾರ any Minister can answer on behalf of the Government.

SRI S BANGARAPPA.—When the Minister holding Home Portfolio is in the House he should have to stand up then submit to the Hon'ble Speaker...

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಕೆಲವು ವಿಚಾರ ಇದೆ, ಹೋಂ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಕೆಲವು ವಿಚಾರಗಳು ಇವೆ, ಎರಡೂ ಇವೆ.

ಶ್ರೀ ಎಸ್. ಬಂಗಾರಪ್ಪ,—ಮಾನ್ಯ ಬಾಗಲಕೋಟೆಯವರೇ. ನಿಮ್ಮಿಂದ ಈ ಸ್ಟೇಟ್‌ಮೆಂಟ್ ಮಾಡಿಸಬಾರದು ಎಂಬುದು ನಮ್ಮ ಉದ್ದೇಶ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ...

ಅಧ್ಯಕ್ಷರು.—ಅವರು ಉತ್ತರ ಓದಿಬಿಡಲಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸ್ಟೇಟ್‌ಮೆಂಟ್ ಯಾರದ್ದು ಎಂದು ನೋಡಿರುತ್ತೀರಾ ? ಇದು ಮಾನ್ಯ ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟ್ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ.Hon'ble Speaker cannot call for the Forest Minister...

ಅಧ್ಯಕ್ಷರು.—ಅವರ ಪರವಾಗಿ ಇವರು ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಪರವಾಗಿ ಹೇಳಿಕೆ ಮಾಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆಯೇ ತಾವು ಅಧ್ಯಕ್ಷರಾಗಿದ್ದೀರಿ, ಸೌಜನ್ಯಕ್ಕಾದರೂ ಅವರು ತಮಗೆ ಈ ರೀತಿ ಹೇಳ ಬೇಡವೇ ?

ಅಧ್ಯಕ್ಷರು.—ಸೌಜನ್ಯ ನಿಮಗೂ ಇರಬೇಕು, ಅವರ ಪರವಾಗಿಯೇ ಇವರು ಓದುತ್ತಿದ್ದಾರೆ, ಪೂರ್ತಿ ಓದಿಬಿಡಲಿ.

SRI M. VEERAPPA MOILY.—Then, the Hon'ble Minister for Forest should have said that I am making the statement on behalf of the Chief Minister ಅಷ್ಟಾದರೂ ಬರಬೇಕಲ್ಲ ಏನಿದಂ ತಾವು ನೇರವಾಗಿ ಫಾರೆಸ್ಟ್ ಮಿನಿಸ್ಟರ್ ರವರನ್ನು ಕರೆಯುವುದು ಅವರು ಹೇಳಿಕೆ ಕೊಡುವುದು ?

ಅಧ್ಯಕ್ಷರಂ.—ಅವರು ಸ್ಟೇಟ್‌ಮೆಂಟ್‌ನ್ನು ಓದಿಬಿಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೀವೆ ಹೋಮ್ ಪ್ರೋರ್ಟ್‌ಫೋಲಿಯೋ ಇಟ್ಟುಕೊಂಡಿರುವವರು. ನೀವಾದರೂ ಸ್ಪೀಕರ್‌ಗೆ ಹೇಳಬೇಕು. ಅಥವಾ ಅರಣ್ಯ ಸಚಿವರಾದರೂ ಸ್ಪೀಕರ್‌ಗೆ ಹೇಳಬೇಕು. ಸಪ್ಲೋಸ್ ಇನ್‌ಪೆಕ್ಷನ್‌ಗೆ ಸಂಬಂಧಪಟ್ಟಹಾಗೆ ಕ್ವಾಲಿಫಿಕೇಷನ್ ಕೇಳಿದರೆ ಅವರಿಂದ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಇದರ ಬೌಂಡರಿ ಕೇಸ್ ಇದೆ. ತಮಗೆ ಇದು ಗೊತ್ತಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉತ್ತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಉತ್ತರ ಕೊಡಬೇಕಾದರೆ ನೀವೇ ಪತಕ್ಕೆ ಸ್ಟೇಟ್‌ಮೆಂಟ್ ಓದಬಾರದೆ ?

ಅಧ್ಯಕ್ಷರು.—ಅವರಿಗೆ ಗಂಟಲು ಸರಿಯಿಲ್ಲ, ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅವರ ಗಂಟಲ ಚಾರ್ಜನ್ನು ನೀವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಾದರೆ ಸರಿ.

ಶ್ರೀ ಜಿ. ಎಸ್. ಬಾಗಲಕೋಟ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತಿ ಗಳ ಪರವಾಗಿ ನಾನು ಇದನ್ನು ಓದುತ್ತೇನೆ. ಹೆಚ್ಚಿನ ಪ್ರಶ್ನೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳೂ ಉತ್ತರ ಕೊಡಬಹುತ್ತಾರೆ.

ಶ್ರೀ ಜಿ. ಎಸ್. ಬಾಗಲಕೋಟ್(ಅರಣ್ಯ ಖಾತೆ ರಾಜ್ಯ ಸಚಿವರು).—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

ಶಿರಸಿ ತಾಲ್ಲೂಕು ಹುಲೇಕಲ್ ರೇಂಜ್ ಆರ್.ಎಫ್.ಓ. ಆಗಿ ಕೆಲಸ ಮಾಡುತ್ತಿದ್ದ ಶ್ರೀ ಅರವಿಂದ ಹೆಗ್ಗಡೆಯವರ ಕೊಲೆಯ ಹಿನ್ನೆಲೆ ಮತ್ತು ತನಿಖೆಯಲ್ಲಿ ಹೊರಬಂದಿರುವ ವಿಷಯಗಳು ಈ ರೀತಿ ಇದೆ,

೧) ೧೯೮೮ನೇ ಏಪ್ರಿಲ್ ೧೯ ಮತ್ತು ೨೦ನೇ ತಾರೀಖಿನ ಮಧ್ಯರಾತಿ ಅರಣ್ಯದಿಂದ ಮರವನ್ನು ಕಳ್ಳಸಾಗಾಣಿಕೆ ಮಾಡುತ್ತಾರೆಂಬ ವರ್ತಮಾನದ ಮೇಲೆ ಆರ್.ಎಫ್.ಓ. ಅರವಿಂದ ಹೆಗ್ಗಡೆಯವರು ತಮ್ಮ ಸಿಬ್ಬಂದಿಯೊಡನೆ ಕೇಚಿಗಾರ್ ಕ್ರಾಸ್‌ನಲ್ಲಿರುವ ಕೊಡೆಮನೆ ಕ್ರಾಸ್ ಎಂಬ ಜಾಗದಲ್ಲಿ ಕಾಯುತ್ತಿದ್ದಾಗ ಬೆಳಗಿನ ಜಾವ ಸುಮಾರು ೩-೩೦ ಘಂಟೆ ವೇಳೆಗೆ ಬಂದ ಲಾರಿ (ಎಂ.ವೈ.ಇ. ೫೦೭೦) ಯನ್ನು ತಡೆದಾಗ ಅದು ನಿಲ್ಲಿಸದೆ ಹೊರಟುಹೋಯಿತು. ಗುಂಡು ಹಾರಿಸಿ ಸದರಿ ವಾಹನವನ್ನು ನಿಲ್ಲಿಸಲು ಮಾಡಿದ ಪ್ರಯತ್ನ ವಿಫಲವಾಯಿತಂ. ಸೆದರಿ ಲಾರಿಯು ಮುಂದೆ ಚಲಿಸಿ ಹೆಗ್ಗಡೆ ಕಟ್ಟೆ ಗ್ರಾಮದ ನೀಲಕಂಠ ಹೆಗ್ಗಡೆಯವರ ಮನೆಯ ಮುಂದೆ ನಿಂತಿದ್ದನ್ನು ಹಿಂಬಾಲಿಸಿ ಬಂದ ಆರ್.ಎಫ್.ಓ. ಮತ್ತು ಸಿಬ್ಬಂದಿಯವರು ಪರಿಶೀಲಿಸಿ ಸೌದೆಯನ್ನು ತುಂಬಿದ್ದ ಆ ಲಾರಿಯನ್ನು ತಮ್ಮ ಸುಬರ್ದಿಗೆ ತೆಗೆದುಕೊಳ್ಳಲು ಪ್ರಯತ್ನ ಪಟ್ಟರು.

ಆಗ ನೀಲಕಂಠ ಹೆಗ್ಗಡೆಯವರ ಮಗನಾಗ ದಿವಾಕರ ಹೆಗ್ಗಡೆ ಮತ್ತು ಇತರರು ಆ ಲಾರಿಯನ್ನು ಕಾನೂನು ಕ್ರಮಕ್ಕೆ ಒಳಪಡಿಸದೆ ಬಿಟ್ಟುಕೊಡಲು ಒತ್ತಾಯ ಮಾಡಿದರು. ಆ ಒತ್ತಾಯಕ್ಕೆ ಆರ್ ಎಫ್. ಓ. ಅರವಿಂದ ಹೆಗ್ಗಡೆಯವರು ಮಣಿಯದಿದ್ದಾಗ ಲಾರಿಯನ್ನು ಸ್ಥಳದಿಂದ ತೆಗೆದುಕೊಂಡು ಹೋಗಲು ಆರೋಪಿಗಳು ನಿರ್ಧರಿಸಿದರು. ಅದನ್ನು ತಡೆಯಲು ಆರ್. ಎಫ್. ಓ. ರವರು ಅಡ್ಡ ಬಂದು ಬಂಪರ್ ಮೇಲೆ ಕುಳಿತರು. ಅದನ್ನು ಲೆಕ್ಕಿಸದೆ ಆರೋಪಿಗಳು ಲಾರಿಯನ್ನು ಬಲಿಸಿಕೊಂಡು ಎರಡು ಫರ್ಲಾಂಗ್ ದೂರದಲ್ಲಿನ ಎಂಒಳ್ಳಿ ಕ್ರಾಸ್ ಎಂಬಲ್ಲಿ ನಿಲ್ಲಿಸಿ ಆರ್. ಎಫ್. ಓ. ರವರನ್ನು ಸೌದೆ ತುಂಡಿನಿಂದ ತಲೆ ಮತ್ತು ಇತರೆ ಭಾಗಗಳಿಗೆ ಹೊಡೆದಂ ಸ್ಥಳದಲ್ಲಿಯೇ ಸಾಯಿಸಿದರು ಮತ್ತು ಲಾರಿಯನ್ನು ಹಕ್ಕದ

ಅರಣ್ಯಕ್ಕೆ ಕೊಂಡುಹೋಗಿ ಲಾರಿಯಲ್ಲಿದ್ದ ಸೌದೆಯನ್ನು ಬಿಸಾಡಿ ಲಾರಿಯನ್ನು ನೀಲಕಂಠ ಹೆಗ್ಗಡೆಯವರ ಮನೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದರು.

೨) ಹೆಗ್ಗಡೆ ಕಟ್ಟಿ ವಿಭಾಗದ ಫಾರೆಸ್ಟರ್ ಶ್ರೀ ಅನಂತರಾಮಕೃಷ್ಣ ಭಟ್ಟರವರ ದೂರಿನ ಮೇಲೆ ಸಿರಸಿ ಗ್ರಾಮಾಂತರ ಠಾಣೆಯಲ್ಲಿ ಮೊಕದ್ದಮೆ ನಂ. ೩೭೨/೮೮ನ್ನು ಭಾರತೀಯ ದಂಡ ಸಂಹಿತೆಯ ೧೪೩, ೧೪೭, ೧೪೮, ೩೫೩, ೩೫೨, ೫೦೪, ೫೦೬ ಮತ್ತು ಕರ್ನಾಟಕ ಅರಣ್ಯ ಕಾಯಿದೆ ಕಲಂ ೨೪ (೧) ಪ್ರಕಾರ ನೋಂದಾಯಿಸಿಕೊಂಡ ಸ್ಥಳೀಯ ಪೋಲೀಸರು ತನಿಖೆಯನ್ನು ನಡೆಸಿದರು.

೩) ಶಿರಸಿ ಸರ್ಕಲ್ ಇನ್ಸ್‌ಪೆಕ್ಟರ್‌ರವರು ತಕ್ಷಣ ತನಿಖೆಯನ್ನು ತೆಗೆದುಕೊಂಡರು. ಉತ್ತರ ಕನ್ನಡ ಜಿಲ್ಲೆಯ ಎಸ್. ಪಿ. ಮತ್ತು ಶಿರಸಿ ಡಿ.ಎಸ್.ಪಿ.ರವರು ಘಟನೆ ದಿನವೇ ಭೇಟಿ ಕೊಟ್ಟು ಸೂಕ್ತ ನಿರ್ದೇಶನವನ್ನು ಕೊಟ್ಟರು.

೪) ಅಪರಾಧ ನಡೆದ ದಿವಸವೇ (೨೩-೪-೮೮) ಶವದ ಮಹಜರ್ ನಡೆಸಿ ಸಾಕ್ಷಿದಾರರನ್ನು ವಿಚಾರ ಮಾಡಿ ಅಪರಾಧ ಮಾಡುವಲ್ಲಿ ಉಪಯೋಗಿಸಲಾದ ಲಾರಿ, ಸೌದೆ ಮತ್ತು ಉಪಯೋಗಿಸಿದ ಆಯುಧ ಇತ್ಯಾದಿ ಸಾಕ್ಷ್ಯಗಳನ್ನು ಸಂಗ್ರಹಿಸಿ ಅಮಾನತ್ತು ಮಾಡಲಾಯಿತಲ್ಲದೆ ಈ ಕೆಳಕಂಡ ೭ ಜನ ಅಪರಾಧಿಗಳನ್ನು ದಸ್ತಗಿರಿ ಮಾಡಲಾಯಿತು. ೧) ದಿವಾಕರ ಹೆಗ್ಗಡೆ ೨) ಮಹಾಬಲೇಶ್ವರ ವೆಂಕಟರಮಣ ಹೆಗ್ಗಡೆ ೩) ಗೋಪಾಲಕೃಷ್ಣ ನಾರಾಯಣ ಹೆಗ್ಗಡೆ ೪) ನಾರಾಯಣ ಗೋಪಾಲಕೃಷ್ಣ ಹೆಗ್ಗಡೆ ೫) ವಿಶ್ವನಾಥ ಹರಿಹರ ಹೆಗ್ಗಡೆ ೬) ಹರಿಹರ ವೆಂಕಟಪ್ಪ ಹೆಗ್ಗಡೆ ಮತ್ತು ೭) ಗಂಗಾಧರ ತಿಮ್ಮಯ್ಯ ಹೆಗ್ಗಡೆ. ಇವರೆಲ್ಲರೂ ಹಾಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

೫) ಅಪರಾಧದ ಗಂಭೀರತೆಯನ್ನು ಗಮನಿಸಿ ಈ ತನಿಖೆಯನ್ನು ಸಿ. ಓ. ಡಿ. ವಿಭಾಗಕ್ಕೆ ವಹಿಸಲಾಗಿದ್ದು ೨೨-೪-೮೮ ರಿಂದ ಸಿ. ಓ. ಡಿ. ವಿಭಾಗದ ಅಧಿಕಾರಿಗಳು ತನಿಖೆಯನ್ನೆ ತೀವ್ರ ಗತಿಯಲ್ಲಿ ನಡೆಸುತ್ತಿದ್ದಾರೆ ಮತ್ತು ಸಾಧ್ಯವಾದ ಎಲ್ಲಾ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ.

ಈ ಕೃತ್ಯಕ್ಕೆ ಸಂಬಂಧಪಟ್ಟ ಅಪರಾಧಿಗಳಾದ ೧) ಪ್ರಭಾಕರ ಗಂಗಾಧರ ಹೆಗ್ಗಡೆ ೨) ಗೋವಿಂದ ತಿಮ್ಮಯ್ಯ ಹೆಗ್ಗಡೆ ೩) ಗುರುಪಾದ ನಾರಾಯಣ ಹೆಗ್ಗಡೆ ಮತ್ತು ೪) ಅಬ್ದುಲ್ ಗಫಾರ್ ಇಮಾಮ್ ಸಾಬ್ ಇವರು ತಲೆ ಮರೆಸಿಕೊಂಡಿದ್ದು, ಅವರು ನಿರೀಕ್ಷಣಾ ಜಾಮೀನಿಗೆ ಹಾಕಿದ್ದ ಅರ್ಜಿಯನ್ನು ಕಾರವಾರದ ಸೆಷನ್ ನ್ಯಾಯಾಲಯ ಮತ್ತು ರಾಜ್ಯದ ಉಚ್ಚ ನ್ಯಾಯಾಲಯವು ತಿರಸ್ಕರಿಸಿವೆ. ತದೀಖಿಂ ೧೧-೫-೮೮ ರಂದು ಈ ನಾಲ್ಕಂ ಮಂದಿಯೂ ಸಹ ಶಿರಸಿ ನ್ಯಾಯಾಧೀಶರ ಮುಂದೆ ಶರಣಾಗತರಾಗಿ ಅವರನ್ನು ನ್ಯಾಯಾಂಗ ಕಸ್ಟಡಿಗೆ ಕೊಡಲಾಗಿದೆ.

೬) ದಿವಗಂತ ಶ್ರೀ ಅರವಿಂದ ಹೆಗ್ಗಡೆ ತನ್ನ ಪ್ರಾಣದ ಹಂಗು ತೊರೆದು ಕರ್ತವ್ಯ ಪಾಲನೆ ಮಾಡಿದುದನ್ನು ಸರ್ಕಾರ ಅಭಿನಂದಿಸಿ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲು ನಿರ್ಧರಿಸಿದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ ದಿವಂಗತ ಶ್ರೀ ಅರವಿಂದಹೆಗ್ಗಡೆಯವರನ್ನು ನಾವು ನಿಜವಾಗಿಯೂ ಅಭಿನಂದಿಸಬೇಕು. ಈ ಅಧಿಕಾರಿ ತನ್ನ ಜೀವದ ಹಂಗನ್ನು ತೊರೆದು ಕೆಲಸ ಮಾಡಿರತಕ್ಕಂಥಾದ್ದು ಇದೆ. ಇದು ಇವತ್ತು ನಮಗೆಲ್ಲರಿಗೂ ಹೆಮ್ಮೆಯನ್ನು ತರತಕ್ಕಂಥ ವಿಚಾರ, ಆದರೆ ನಾವು ಇಂದು ಒಂದು ಜೀವವನ್ನು ಕಳೆದುಕೊಂಡಿದ್ದೇವೆಂದು ಮನಸ್ಸಿಗೆ ನೋವು ತರತಕ್ಕಂಥ ವಿಚಾರ ಕೂಡ ಇಲ್ಲಿ ಇದೆ, ಅವರು ರಾತ್ರಿ ೨-೦೦ ಅಥವಾ ೩-೦೦ ಗಂಟೆಯ ಸಮಯದಲ್ಲಿ ತಮ್ಮ ಆಸ್ಪೆಂಟ್‌ಗಳ ಅಂದರೆ ಗಾರ್ಡ್ಸ್, ಮಂತ್ತು ಇನ್ನಿತರೆ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಲಾರಿಯನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡಿದರೂ ಸಹ. ಅವರು ರಸ್ತೆಗೆ ಕಲ್ಲು ಗಳನ್ನು ಅಡ್ಡಗಟ್ಟಿದ್ದರೂ ಸಹ ವೇಗವಾಗಿ ಲಾರಿಯನ್ನು ತೆಗೆದುಕೊಂಡು ಹೋಗಿ ನೀಲಕಂಠಹೆಗಡೆಯವರ ಮನೆಯಮುಂದೆ ನಿಲ್ಲಿಸಿರತಕ್ಕಂಥ ಪ್ರಕರಣ ಇದು. ತಾವು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಏನು ಹೇಳಿದ್ದೀರೆಂದರೆ ದಿನಾಂಕ ೧೯-೨೧ನೇ ತಾರೀಖಿನ ೪ಪ್ರಿಲ್ ತಿಂಗಳ ೮೮ರಂದು. ಆರಣ್ಯದಿಂದ ಮರವನ್ನು ಕಳ್ಳಸಾಗಾಣಿಕೆಯಿಂದ ತೆಗೆದುಕೊಂಡು ಹೋಗಿರತಕ್ಕಂಥ ವಿಚಾರವೆಂದು ಹೇಳಿದ್ದೀರಿ. ಆ ಲಾರಿ ಶ್ರೀ ನೀಲಕಂಠಹೆಗಡೆಯವರ ಮನೆ ಮುಂದೆ ನಿಂತಿತ್ತು. ಆದರೆ ನಂಬರು ಎಂ.ವೈ.ಇ ೫೦೭೦ ಎನ್ನತಕ್ಕಂಥಾದ್ದು ಎಂದು ಕಾವೇ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೀರಿ. ಇವತ್ತು ಆ ಲಾರಿಯ ಮಾಲೀಕರು ಯಾರು? ಅಲ್ಲಿಗೆ ವಿತಕ್ಕೆ ಬಂತು? ಎನ್ನತಕ್ಕಂಥ ವಿಚಾರ ಸಹ ಇಲ್ಲಿ ಬರುತ್ತದೆ. ಈ ನೀಲಕಂಠಹೆಗಡೆಯಂಪರು ಜನತಾ ಪಕ್ಷದ ಮುಖಂಡರು ಎಂದು ಕೇಳಿದ್ದೇನೆ. ಅವರು ಹಿಂದೆ ಅಧ್ಯಕ್ಷರುನ

ಆಗಿದ್ದವರು. ಇವರ ಮನೆ ಮುಂದೆ ಲಾರಿ ಬಂದು ನಿಂತಿತ್ತು ಎಂದು ತಾವು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೀರಿ. ಆಲ್ಲಿನ ಡಿ.ಎಫ್.ಒ. ರವರು ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಇವರಿಗೆ ತಿಳಿಸಿದರು ಎಂದು ಇಲ್ಲಿದೆ. ಇಂತಹ ಒಬ್ಬ ವ್ಯಕ್ತಿಯ ಮೇಲೆ ನೀವು ನಿಮ್ಮ ಪಕ್ಷಕ್ಕೆ ಸೇರಿದ್ದಾರೆಂದು ಅವರ ಮೇಲೆ ಏನೂಕ್ರಮ ತೆಗೆದುಕೊಳ್ಳದೆ ಇರತಕ್ಕಂಥಾದು ಒಂದು ಪ್ರಮುಖ ವಿಚಾರ. ಇವೊತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಗೃಹ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವಾಗ ಅವರು ಇದಕ್ಕೆ ಉತ್ತರ ಕೊಡಬೇಕು. ಎರಡನೆಯದು ಆ ಲಾರಿಯನ್ನು ಅವರ ಮನೆ ಮುಂದೆ ತೆಗೆದುಕೊಂಡು ಹೋಗಿದ್ದಾಗ ಶ್ರೀ ಅರವಿಂದ ಹೆಗಡೆಯವರು ತಮ್ಮ ಸುಬರ್ದಿಗೆ ಆ ಲಾರಿಯನ್ನು ತೆಗೆದುಕೊಳ್ಳಲು ಬಂದರು. ಆಗ ಆ ಲಾರಿಯನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಪಟ್ಟರು ಕಾರಣ ಅವರಲ್ಲಿ ಪರವಾನಿಗೆ ಇರಲಿಲ್ಲ, ಪರವಾನಿಗೆ ಇಗದಿದ್ದರೆ ಹಿಡಿಯುತ್ತಾರೆಂದು ತಿಳಿದು ಆ ಲಾರಿಯನ್ನು ಪುನಃ ಹಿಂದಕ್ಕೆ ತೆಗೆದುಕೊಂಡು ಹೋದರೆಂದು ಇದೆ, ಲಾರಿಯಲ್ಲಿದ್ದ ಮರವನ್ನು ಪಕ್ಕದ ಅರಣ್ಯಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಆದರೆ ತಾವು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಏನು ಹೇಳಿದ್ದೀರೆಂದರೆ ಲಾರಿಯನ್ನು ಪಕ್ಕದ ಅರಣ್ಯಕ್ಕೆ ಕೊಂಡು ಹೋಗಿ ಲಾರಿಯಲ್ಲಿದ್ದ ಸೌದೆಯನ್ನು ಬಿಸಾಡಿ ಲಾರಿಯನ್ನು ನೀಲಕಂಠ ಹೆಗಡೆಯವರ ಮನೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದರು ಎಂದು ಇದೆ. ಒಂದು ಕಡೆ ಮರ ಎಂದು ಹೇಳುತ್ತೀರಿ ಇನ್ನೊಂದು ಕಡೆ ಸೌದೆ ಎಂದು ಹೇಳುತ್ತಿದ್ದೀರಿ. ಈ ಸ್ಟೇಟ್‌ಮೆಂಟ್ ಸರಿ ಇಲ್ಲ. ಇದು ಕೋರ್ಟಿಗೆ ಹೋದಗೆ ಏನಾಗುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಿ. ಮರಕ್ಕೂ ಸೌದೆಗೂ ವ್ಯತ್ಯಾಸವಿಲ್ಲವೇ? ಸೌದೆ ಎಂದರೆ ಫೈರ್‌ವುಡ್, ಟಿಂಬರ್ ಎಂದರೆ ಮರ. ಆದ್ದರಿಂದ ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಈಗಲಾದರೂ ತಿದ್ದುಪಡಿ ಮಾಡಿ ಇದು ಕೋರ್ಟಿನಲ್ಲಿ ಒಂದು ಎವಿಡೆನ್ಸ್ ಆಗುತ್ತದೆ. ಇದನ್ನು ತಾವು ವಿಚಾರ ಮಾಡಬೇಕು. ಆಮೇಲೆ ಇವರ ಮೇಲೆ ಕೇಸನ್ನು ಸಹ ಹಾಕಿದ್ದೀರಿ. ಭಾರತೀಯ ದಂಡ ಸಂಹಿತೆಯ ೧೪೩, ೧೪೭, ೧೪೮, ಇತ್ಯಾದಿ ಮತ್ತು ಅರಣ್ಯ ಕಾಯ್ದೆ ೨೪ (೧) ಪ್ರಕಾರ ಸಹ ಕೇಸ್ ಹಾಕಿದ್ದೀರಿ. ಕೇಸ್ ರಿಜಿಸ್ಟರ್ ಮಾಡಿರುವುದೂ ಎಲ್ಲಾ ಸರಿ ಇದೆ. ಆದರೆ ಇಲ್ಲಿರತಕ್ಕಂಥ ವಿಚಾರವೇನೆಂದರೆ ಈ ಆರೋಪಿಗಳು ತಲೆ ಮರೆಸಿಕೊಂಡಿದ್ದರು. ಅವರು ಯಾರು ಯಾರು ಎಂದರೆ ಪ್ರಭಾಕರ ಹೆಗಡೆ ಗೋವಿಂದ ತಿಮ್ಮಯ್ಯ ಹೆಗಡೆ ಮತ್ತು ಗುರುಪಾದ ನಾರಾಯಣ ಹೆಗಡೆ ಮತ್ತು ಅಬ್ದುಲ್ ಗಫಾರ್ ಇಮಾಮ್‌ಸಾಬ್ ಇವರು ೧೧-೫-೮೮ ರಂದು ಸಿರಸಿ ನ್ಯಾಯಾಧೀಶರ ಮುಂದೆ ಹೋಗಿದ್ದಾರೆ. ಆಲ್ಲಿಯವರೆವಿಗೂ ಅವರು ಬೇಲ್ ಅಪ್ಲಿಕೇಶನ್ ಹಾಕುತ್ತಲೇ ಬಂದಿದ್ದಾರೆ.

೧-೦೦ ಪಿ, ಎಂ.

೧೧-೫-೮೮ರವರೆಗೆ ಅವರಿಗೆ ಎಲ್ಲೂ ಕೂಡ ಬೇಲ್ ಕೊಟ್ಟಿಲ್ಲ. ಆಂಟಿಸಿಪೇಟರಿ ಬೇಲನ್ನೂ ಕೊಟ್ಟಿಲ್ಲ. ೨೨-೪-೮೮ ರಿಂದ ಇದನ್ನು ಸಿ ಓ ಡಿ. ಗೆ ವಹಿಸಿದ್ದೀರಿ ಸುಮಾರು ಎರಡು ಮೂರು ದಿವಸದಲ್ಲಿ ನೀವು ಸಿ.ಓ.ಡಿ, ಗೆ ಕೊಟ್ಟಿದ್ದೀರಿ, ಅವರಿಗೆ ಬೇಲ್ ಏನಾದರೂ ಸಿಕ್ಕಿದ್ದರೆ, ಏನು ಗತಿಯಾಗುತ್ತಿತ್ತು. ಅರೆಸ್ಟ್ ಆಗಿ ಬೇಲ್‌ಗೆ ಪ್ರಯತ್ನ ಮಾಡುವುದು ಒಂದು, ಅರೆಸ್ಟ್ ಆಗದೆಯೇ ಆಂಟಿಸಿಪೇಟರಿ ಬೇಲ್‌ಗೆ ಪ್ರಯತ್ನ ಮಾಡುವುದು ಮತ್ತೊಂದು. ಇವೆರಡಕ್ಕೂ ಬಹಳ ವ್ಯತ್ಯಾಸ ಇದೆ. ಇಲ್ಲಿಯವರೆಗೂ ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು? ಸುಮಾರು ೧೫ ದಿವಸಗಳ ಕಾಲ ಆರಾಮವಾಗಿ ಸಿರ್ಸಿ ತಾಲ್ಲೂಕಿನಲ್ಲಿ ಇವರು ಓಡಾಡಿಕೊಂಡು ಇದ್ದರು. ಸಿರ್ಸಿ ಟೌನಿನಲ್ಲಿ ಇವರನ್ನು ಅನೇಕ ಜನರು ನೋಡಿದ್ದಾರೆ. ಅವರು ಬಸ್ಸಿನಲ್ಲಿ ಓಡಾಡಿದ್ದಾರೆ. ಪ್ರೈವೇಟ್ ಕಾರಿನಲ್ಲಿ ಓಡಾಡಿದ್ದಾರೆ ಸ್ಥಳೀಯವಾಗಿ ರಾಜಕೀಯ ಬೆಂಬಲ ಇವರಿಗೆ ಇದೆ ಎಂಬ ಕಾರಣದಿಂದ ಇವರನ್ನು ಆರಾಮವಾಗಿ ಓಡಾಡಿಕೊಂಡಿರಲು ಬಿಟ್ಟಿದ್ದೀರಿ, ಆಂಟಿಸಿಪೇಟರಿ ಬೇಲ್ ರೀಜಕ್ಟ್ ಆದಮೇಲೆ ಇನ್ನು ಸಾಧ್ಯವಿಲ್ಲವೆಂಬುದನ್ನು ತಿಳಿದುಕೊಂಡು ೧೧-೫-೮೮ ರಂದು ಸಿರ್ಸಿ ಕೋರ್ಟಿಗೆ ಹಾಜರಾಗಿದ್ದಾರೆ. There is a lapse on the part of investigation agency. ಇಲ್ಲಿಯವರೆಗೆ ನಿಮ್ಮ ಗೃಹ ಇಲಾಖೆಯವರು ಅಥವಾ ಸಿ.ಓ.ಡಿ. ಯವರು ಏನು ಮಾಡುತ್ತಿದ್ದರು ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ದಸ್ತಗಿರಿಯಾಗಿರುವವರಲ್ಲಿ ಮೊದಲು ೭ ಜನ ಇದ್ದರು. ಈಗ ಎಲ್ಲಾ ಸೇರಿ ೧೧ ಆಗುತ್ತದೆ. ಈ ೧೧ ಜನರ ಬಗ್ಗೆ ತೀವ್ರಗತಿಯಲ್ಲಿ ವಿತಕ್ಕೆ ಕಾರ್ಯಕ್ರಮ ಹಾಕಿಲ್ಲ? ಇದರ ಬಗ್ಗೆ ಸಂಪೂರ್ಣವಾದ ವಿವರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್.— ಇಲ್ಲಿ ತಾವು ಕೊಟ್ಟಿರತಕ್ಕ ಹೇಳಿಕೆಯಂನ್ನು ನೋಡಿದಾಗ, ನನಗೆ ಕೆಲವು ಸಂಶಯಗಳು ಬರುತ್ತವೆ. ಶ್ರೀ ನೀಲಕಂಠ ಹೆಗಡೆ ಮತ್ತು ಉಳಿದ ಮೂರರಂ ಜನರನ್ನು ಬಂಧಿಸಬೇಕಾದರೆ ಇಷ್ಟು ದಿವಸ ಬೇಕಾಯಿತೇ ೧೧ನೇ ತಾರೀಖಿನವರೆಗೆ ಅವರು ಕಾರವಾರದಲ್ಲಿ ಬೆಂಗಳೂರಿನಲ್ಲಿ ಓಡಾಡುತ್ತಿದ್ದರು. ಅವರನ್ನು ಅರೆಸ್ಟ್ ಮಾಡಲು ಸಾಕಷ್ಟು ಅವಕಾಶ ಸಿ.ಓ.ಡಿ. ಗೆ ಇತ್ತು. ಈ ರೀತಿ ಇದ್ದಾಗ ನಿಮ್ಮ ಸಿ.ಓ.ಡಿ. ಇಲಾಖೆ ಅಸ್ತಿತ್ವದಲ್ಲಿ ಇತ್ತೋ ಇಲ್ಲವೊ? ಎಂದು ಕೇಳಬೇಕಾಗುತ್ತದೆ. ಇವರನ್ನು ನಿಧಾನವಾಗಿ ಅರೆಸ್ಟ್ ಮಾಡಿ ಎಂದು ಏನಾದರೂ ಆದೇಶ ಸಿ.ಓ.ಡಿ. ಖಾತೆಯವರಿಗೆ ಒಳಗಿನಿಂದ ಒಳಗೆ ಇತ್ತೆ? ಅವರಿಗೆ ಆಂಟಿಸಿಪೇಟರಿ ಬೇಲ್ ಸಿಕ್ಕಿದ್ದರೂ ಸಹ ಅವರು ಸರಂಡರ್ ಆಗುತ್ತಿರಲಿಲ್ಲ. ಇಲ್ಲಿ ಗಮನಸೆಳೆಯುವ ಸೂಚನೆ ಬರದೆ ಇದ್ದಿದ್ದರೆ ಅವರಂ ಸುಪ್ರೀಂ ಕೋರ್ಟಗೆ ಹೋಗುತ್ತಿದ್ದರು. ಮತ್ತೆ, ಸುಪ್ರೀಂ ಕೋರ್ಟನಲ್ಲಿ ಏನಾಗುತ್ತಿತ್ತೋ? ಎಂಬುದನ್ನು ಇವರು ನೋಡಿ ಕುಳಿತುಕೊಳ್ಳುತ್ತಿದ್ದರು. ಅಲ್ಲಿ ಏನಾದರೂ ಇವರಿಗೆ ಆಂಟಿಸಿಪೇಟರಿ ಬೇಲ್ ಸಿಕ್ಕಿದರೆ ದೊಡ್ಡವರನ್ನು ಅರೆಸ್ಟ್ ಮಾಡುವಂಥ ಒಂದು ಪಾಪದ ಕೆಲಸ ತಪ್ಪುತ್ತದೆ ಎಂದಂ ಅವರು ಸುಮ್ಮನೆ ಇರುತ್ತಿದ್ದರು. ಇಲ್ಲಿ ಈ ವಿಷಯ ಅಸೆಂಬ್ಲಿಗೆ ಬಂದಿದೆ ಎಂಬ ದೃಷ್ಟಿಯಿಂದ ಅವರು ಸರಂಡರ್ ಆಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇವರು ಜನತಾ ಪಕ್ಷದ ಒಬ್ಬ ಮುಖಂಡರು ಆಗಿದ್ದಾರೆ.

ಅಧ್ಯಕ್ಷರಂ.— ನೇರವಾಗಿ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಆರ್. ಎನ್. ನಾಯಕ್.— ಉತ್ತರ ಕನ್ನಡದಲ್ಲಿ ಹಲವಾರು ಜನತಾ ಪಕ್ಷದ ಮುಖಂಡರಂ ಗಳು ಮರಗಳ್ಳತನದಲ್ಲಿ ನಿರತರಾಗಿದ್ದಾರೆ..

SRI R.V. DESHPANDE.— I object to the using of the above words. ಇವರು ಈ ರೀತಿ ಹೇಳುವುದು ಸರಿಯಲ್ಲ. ಸ್ಪೆಸಿಫಿಕ್ ಆಗಿ, ಇಂಥವರು ಎಂದು ಹೆಸರನ್ನು ಹೇಳಲಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ದೇಶಪಾಂಡೆಯವರು ಈ ವಿಚಾರದಲ್ಲಿ ಸಿಟ್ಟಿಗೇಳುವುದು ಸರಿಯಲ್ಲ. ಮುಂದೆ ಬರಂವ ಫಾರೆಸ್ಟ್ ಇಲಾಖೆಯ ಡಿಪ್ಯೂಡ್‌ಮೇಲೆ ಮಾತನಾಡುವಾಗ ಯಾರ್ಯಾರು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಅವರ ಹೆಸರು ಮತ್ತು ದಾಖಲೆಗಳ ಸಮೇತ ಇಡುತ್ತೇನೆ. ಆಗ ಗೊತ್ತಾಗುತ್ತದೆ ನಿಮ್ಮ ಪಕ್ಷದ ಮುಖಂಡರು ಇನ್‌ವಾಲ್ವ್ ಆಗಿರುವುದು. ಆದ್ದರಿಂದ, ದಯವಾಡಿ ಈಗ ತಾವು ಸಿಟ್ಟಿಗೇಳಬೇಡಿ. ಈಗ ಏನಾಗಿದೆ ಎಂದರೆ, ಕಳ್ಳಸಾಗಾಣಿಕೆ ಆಗುವುದನ್ನು ತಡೆಗಟ್ಟುವುದಕ್ಕೆ ಹೋದ ಅಧಿಕಾರಿಯ ಮರ್ಡರ್ ಆದಮೇಲೆ ಬೇರೆ ಅಧಿಕಾರಿಗಳಿಗೆ ಭಯ ಜಾಸ್ತಿಯಾಗಿದೆ. ಅಧಿಕಾರಿಗಳಕ ಸೋತುಹೋಗಿದ್ದಾರೆ.

MR. SPEAKER.—

> "There shall be no debate on such Statement at the time it is made but each member in whose name the item stands in the list of business may, with the permission of the Speaker ask a question"

This is what the Rule says. It is "a question" and not "questions".

ಶ್ರೀ ಆರ್. ಎನ್. ನಾಯಕ್ — ಕಪಾದಿತರು ಇದುವರೆಗೂ ಓಡಾಡುತ್ತಲೇ ಇದ್ದರೂ ಅವರುಗಳನ್ನು ಅರೆಸ್ಟ್ ಮಾಡುವುದಕ್ಕೆ ಸಿ.ಓ.ಡಿ.ಯವರಿಗೆ ಏನು ತೊಂದರೆ ಇತ್ತು? ನಿಲಕಂಠ ಹೆಗಡೆ ಮತ್ತು ಅವರ ಸಂಬಂಧಿಕರು ಸಿರಸಿ ತಾಲ್ಲೂಕಿನಲ್ಲಿ ಈ ಹಿಂದೆ ಹಲವಾರು ವರ್ಷಗಳ ಮರಗಳ್ಳತನದ ಕೇಸ್‌ನಲ್ಲಿ ಸಿಕ್ಕಿಬಿದ್ದಿದ್ದರು.

ಅಧ್ಯಕ್ಷರಂ.— ಈಗ ಮಾತನಾಡುತ್ತಿರುವ ವಿಷಯಕ್ಕೂ ಅದಕ್ಕೂ ಏನು ಸಂಬಂಧ ?

ಶ್ರೀ ಆರ್. ಎನ್. ನಾಯಕ್.—ಹಾಗಾದರೆ ಬೇರೆ ತೆರಹ ಕೇಳುತ್ತೇನೆ,

ಅಧ್ಯಕ್ಷರು —ಎಲ್ಲಾ ಪೋಲೀಸ್ ಸ್ಟೇಷನ್‌ಗಳಿರುವ ಗುನ್ನೆ ಎಲ್ಲಾ ಇಲ್ಲಿ ತಂದರೆ ಹೇಗೆ ? You can ask "Whether you are satisfied with the C. O. D. enquiry or not"

ಶ್ರೀ ಆರ್. ಎನ್. ನಾಯಕ್.—ಇನ್ನೂ ಒಂದು ವಿಚಾರವನ್ನು ಕೇಳುತ್ತೇನೆ. ಡಿ.ಎಫ್.ಓ. ಅವರು ರೈಫಲ್ ಮತ್ತು ರಿವಲ್ವಾರ್‌ಗಳನ್ನು ಕಳ್ಳಸಾಗಾಣಿಕೆಯವ್ನು ತಡೆಯಲು ಕಳುಹಿಸಿದ್ದಾರೆ.

ಅಧ್ಯಕ್ಷರು.—ಅದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ಸ್ಟೇಟ್‌ಮೆಂಟ್‌ನಲ್ಲೇ ಇದೆ.

ಶ್ರೀ ಆರ್. ಎನ್. ನಾಯಕ್.—ತಾವು ಈ ಸ್ಟೇಟ್‌ಮೆಂಟ್‌ನ್ನು ಓದಿಲ್ಲವೆಂದು ಕಾಣುತ್ತದೆ. ಓದಿದ್ದರೆ ಚೆನ್ನಾಗಿರುತ್ತಿತ್ತು. ರಿವಲ್ವಾರ್‌ನಿಂದ ಗುಂಡು ಏಕೆ ಹಾರಲಿಲ್ಲ ? ರಿವಲ್ವಾರ್ ಮತ್ತು ರೈಫಲ್‌ಗಳು ಸರಿಯಾಗಿರಲಿಲ್ಲ, ಸರಿಯಾಗಿಲ್ಲದ ಆಯುಧಗಳನ್ನು ರೇಂಜ್ ಆಫೀಸರ್‌ಗೆ ಕೊಟ್ಟು ಡಿ ಎಫ್.ಓ.ನವರು ಕಳುಹಿಸಿಕೊಟ್ಟಿದ್ದಾರೆ. ಈ ಡಿ.ಎಫ್.ಓ, ಅವರು ನೀಲಕಂಠ ಹೆಗಡೆ ಜೊತೆ ಕಳ್ಳಸಾಗಾಣಿಕೆಯಲ್ಲಿ ಶಾಮಿಲಾಗಿದ್ದಾರೆಂದು ನನ್ನ ವಾದ. ಅದಕ್ಕೆ ತಾವು ಉತ್ತರ ಕೊಡಬೇಕು.

ಅಧ್ಯಕ್ಷರು.—ಕ್ವಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಆರ್. ಎನ್. ನಾಯಕ್.—ತಾವು ನಾನು ಮಾತನಾಡುವ ಧಾಟಿಯನ್ನೇ ತಪ್ಪಿಸುತ್ತೀರಿ. ಸಿ.ಓ.ಡಿ.ಯವರು ಇದುವರೆಗೆ ಅವರುಗಳನ್ನು ಏಕೆ ಬಂಧಿಸಲಿಲ್ಲ ? ಜನತಾ ಪಕ್ಷದ ಮುಖಂಡರಾಗಿರುವುದರಿಂದ ಅವರನ್ನು ಬಂಧಿಸಲಿಲ್ಲವೆ ?

ಅಧ್ಯಕ್ಷರು.—ಕಾಂಗ್ರೆಸ್ ಪಕ್ಷ ಜನತಾ ಪಕ್ಷ ಎನ್ನುವುದನ್ನು ಬಿಟ್ಟುಬಿಡಿ.

ಆರ್. ಎನ್. ನಾಯಕ್.—ಈ ಡಿ.ಎಫ್.ಓ.ನವರು ಮತ್ತು ನೀಲಕಂಠ ಹೆಗಡೆಯವರು ಹಳೆಯ ಸ್ನೇಹಿತರುಗಳು. ನಾನು ಈಗ ಮುಖ್ಯ ಮಂತ್ರಿಯವರನ್ನು ಕೇಳುವುದೇನೆಂದರೆ, ಅರಣ್ಯ ರಕ್ಷಕರೆಲ್ಲಾ ಸೇರಿ ಈ ಕೇಸ್‌ನ್ನು ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ಒತ್ತಾಯ ಮಾಡಿರುವ ಮೇರೆಗೆ ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಬೇಕು.

ಅಧ್ಯಕ್ಷರು.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ನೀವು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನದು ಒಂದೇ ಒಂದು ವಿಷಯ. ನೀಲಕಂಠ ಹೆಗಡೆ ಎನ್ನತಕ್ಕ ಲಾರಿ ಓನರ್ ಏನಿದ್ದಾರೆ ಅವರನ್ನು ಈ ಕೇಸ್‌ನಲ್ಲಿ ಏಕೆ ಇನ್‌ವಾಲ್ವ್ ಮಾಡಿಲ್ಲ ? ಅವರ ಮಕ್ಕಳಿಂಗಳೇ ಶ್ರೀ ಅರವಿಂದ ಹೆಗಡೆಯವರನ್ನು ಕೊಲೆ ಮಾಡಿದ್ದುದಂ ಇವರನ್ನು ಬಿಟ್ಟು ಮಿಕ್ಕವರನ್ನು ಮಾತ್ರ ಕೇಸ್‌ನಲ್ಲಿ ಸೇರಿಸಿದ್ದೀರಿ. ನೀಲಕಂಠ ಹೆಗಡೆಯವರು ಜನತಾ ಪಕ್ಷಕ್ಕೆ ಸಂಬಂಧಪಟ್ಟವರೆಂದು ಅವರನ್ನು ಕೇಸ್‌ನಲ್ಲಿ ಸೇರಿಸಿಲ್ಲವೆ ? ಆಮೇಲೆ ರೆಂಜ್ ಫಾರೆಸ್ಟ್ ಅಸೋಸಿಯೇಷನ್‌ನವರು ಈಗಾಗಲೇ ಒಂದು ಮನವಿಯನ್ನು ಸಲ್ಲಿಸಿ ಇದು ಇಂಪಾರ್ಷಿಯಲ್ ಆಗಿ ಎನ್‌ಕ್ವೈರಿ ಆಗುವುದಕ್ಕೆ ಸಿ.ಬಿ.ಐ.ಗೆ ಸೇರಿಸಬೇಕೆಂದು ಕೇಳಿಕೊಂಡಿದ್ದಾರೆ. ಅದನ್ನು ತಾವು ಮಾಡುತ್ತೀರೋ ? ಹೇಗೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಭಾಗಗಳು ಇವೆ ಒಂದನೆಯ ಭಾಗ ಎಂದರೆ, ಯಾರು ಅರವಿಂದ ಹೆಗಡೆಯವರು ಒಂದು ರೀತಿಯಲ್ಲಿ ಹುತಾತ್ಮರಾಗಿದ್ದಾರೆ, ರಾಜ್ಯದ ಒಂದು ಅರಣ್ಯವನ್ನು ರಕ್ಷಣೆ ಮಾಡುವುದರಲ್ಲಿ ತಮ್ಮ ಪ್ರಾಣವನ್ನು ಆಹುತಿ ಮಾಡಿಕೊಂಡಿದ್ದಾರೆ ಇದು ಶ್ರೇಷ್ಠವಾದಂತಹ ಒಂದು ಬಲಿದಾನವನ್ನು ಅವರು ಮಾಡಿದ್ದಾರೆ ಎಂದು ಹೇಳಬೇಕು. ಅಂತಹ ಒಬ್ಬ ವ್ಯಕ್ತಿ ಪಂಧ್ರರಾತ್ರಿ ಈ ವರ್ತಮಾನ ಇದ್ದಮೇಲೆ, ಈ ವರ್ತಮಾನವನ್ನು ಡಿ.ಎಫ್.ಓ.ರವರಿಗೂ ಕೂಡ ತಿಳಿಸಿ ಹೋಗಿದ್ದಾರೆ. ಅವರೇ ಇವರಿಗೆ ರೈಫಲ್ ಮತ್ತು ರಿವಾಲ್ವರ್‌ನ್ನು ಕೊಟ್ಟಿದ್ದಾರೆ. ಅದನ್ನು ಆರ್.ಎಫ್.ಓ. ತೆಗೆದುಕೊಂಡು ಬಂದಿದ್ದಾರೆ. ಆ ಆಯುಧಗಳು ಸುಸ್ಥಿತಿಯಲ್ಲಿವೆ ಎಂದು ನಂಬಿಕೆ ಇಟ್ಟುಕೊಂಡು ಇವರು ತೆಗೆದುಕೊಂಡು ಹೋಗಿದ್ದಾರೆ. ಆದರೆ ಪ್ರಯೋಗ ಮಾಡಿದಾಗ ಮಾತ್ರ ಬಂದೂಕು ಮತ್ತು ರಿವಾಲ್ವರ್ ಎರಡೂ ಕೆಲಸ ಮಾಡಲಿಲ್ಲ.

ಎರಡನೆಯ ಭಾಗ, ಅಲ್ಲಿ ಲಾರಿಯನ್ನು ಹಿಡಿದು ನಿಲ್ಲಿಸಿ ಹೋರಾಟ ಮಾಡತಕ್ಕಂಥ ಸಂದರ್ಭ ಇರಬಹುದು, ತನ್ನ ಪ್ರಾಣಕ್ಕೆ ಅಪಾಯ ಇದೆ. ನೀವು ಬರಬೇಕೆಂದು ಫೋನ್ ಮೂಲಕ ಡಿ.ಎಫ್.ಓ. ರವರನ್ನು ಸಂಪರ್ಕಿಸಿದ್ದಾರೆ. ಅರವಿಂದ್ ಹೆಗೆಡೆಯವರು ಸ್ವತಃ ಫೋನ್ ಮಾಡಿದ್ದಾರೆ. It is only 10 or 15 kilom-teis from D.F.O's residence, if I am not incorreet. ಪ್ರಾಣಕ್ಕೆ ಅಪಾಯ ಇದೆ ಮತ್ತು ಅರವಿಂದ್ ಹೆಗಡೆಯವರಿಗೆ ರೈಫಲ್ ಕೊಟಿ ದ್ದು

ಇವರಿಗೆ ಗೊತ್ತಿದೆ. ಇಷ್ಟಲ್ಲದೆ ಅವರು ಜೀಪನ್ನು ಕೂಡ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. D.F.O. was asked to come. D.F.O. does not come. ಇಷ್ಟೆಲ್ಲಾ ಗೊತ್ತಿದ್ದರೂ ಕೂಡ ಡಿ.ಎಫ್.ಓ. ಅಲ್ಲಿಗೆ ಹೋಗಲಿಲ್ಲ. ಅಪಾಯ ಎಂದು ಗೊತ್ತಿದ್ದರೂ ಹೋಗಲಿಲ್ಲ. ಅಲ್ಲಿ ಭೀಕರವಾದಂಥ ಕೊಲೆ ಆಗುತ್ತದೆ. ಆದಮೇಲೆ ಡಿ.ಎಫ್.ಓ.ರವರು ಡೆಡ್‌ಬಾಡಿ ನೋಡುವುದಕ್ಕೆ ಬರುತ್ತಾರೆ. There is a clear case of negligence if not culpable involvement. ಮರ್ಡರ್ ಕೇಸ್‌ನಲ್ಲಿ ಎಫ್ಐರಪಂಟ್ಟಿಗೆ ಇದೆ. It is for the C.O.D. to investigate. ಅದನ್ನು ತಾವು ವಿಚಾರ ಮಾಡಿ. There is a clear laid case of negligence and laxity and exposing an officer to the smugglers. This has been done by the D.F.O. ತಾವು ಈ ಬಗ್ಗೆ ಯಾವ ಆಕ್ಷನ್ ಕೂಡ ತೆಗೆದುಕೊಂಡಿಲ್ಲ, ಏಕೆ ? ಸಂಬಂಧಪಟ್ಟ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಲಿಲ್ಲ ಏಕೆ ? ಅದನ್ನು ತಾವು ದಯವಿಟ್ಟು ಹೇಳಬೇಕು. ಇಂತ ಅಪಾಯದಿಂದ ಸುಳಿವಿನ ಬಗ್ಗೆ ಡಿ.ಎಫ್.ಓ.ರವರಿಗೆ ಫೋನ್ ಮೂಲಕ ಸಂಪರ್ಕ ಬಂದಿದೆ, ಆ ಮೇಲೆ ವೈರ್‌ಲೆಸ್ ಮುಖಾಂತರವೂ ಸಂಪರ್ಕ ಮಾಡಿದೆ, ಅನಾಹುತಕ್ಕೆ ಮೊದಲು ಇವರ ಸಂಪರ್ಕವನ್ನು ಅವರು ಮಾಡಿದ್ದಾರೆ. It is admitted by the D.F.O. D.F.O. was contacted over wireless. ಬಹುಶಃ ಡಿ.ಎಫ್.ಓ. ಸರಿಯಾಗಿ ಕೆಲಸ ನಿರ್ವಹಿಸಿದ್ದರೆ, ಹೆಚ್ಚು ಪೋಲೀಸ್ ಬಲ ಮತ್ತು ಅವರೇ ಸ್ವತಃ ಮಧ್ಯ ರಾತ್ರಿ ಹೋಗಿ ಒಂದು ಫೋರ್ಸ್‌ನ್ನು ತೆಗೆದುಕೊಂಡು ಹೋಗಿದ್ದರೆ, ಆರವಿಂದ ಪೆಗಡೆಯವರು ಉಳಿಯುತ್ತಾ ಇದ್ದರು. ಈ ವಿಚಾರದಲ್ಲಿ ಸರಕಾರ ಇಷ್ಟು ನಿಸ್ತೇಜವಾಗಿ, ನಿಷ್ಕ್ರಿಯವಾಗಿ ಕುಳಿತುಕೊಂಡಿದ್ದು ಏತಕ್ಕಾಗಿ ? ಯಾರ ಪ್ರಭಾವದ ಮೇರೆಗೆ ಹೀಗೆ ನಡೆದಿದೆ ? ದಯವಿಟ್ಟು ಹೇಳಬೇಕು. Why do you protect that D.F.O. ? Why there is a vested interest for you ?

ಎರಡನೆಯದು, ಅಧ್ಯಕ್ಷರೇ, ಈ ಇನ್‌ವೆಸ್ಟಿಗೇಷನ್ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ಅದನ್ನು ನಾನು ಸೂಕ್ಷ್ಮವಾಗಿ ನೋಡಿದ್ದೇನೆ. ಅದೇ ಪ್ರಕಾರ ಡಿ.ಎಫ್.ಓ. ಏನು ವರದಿ ಕೊಟ್ಟಿದ್ದಾರೆ ಅದನ್ನು ಕೂಡ ಪರಿಶೀಲನೆ ಮಾಡಿ. ಈ ಕೆಲಸವನ್ನು ಗೃಹ ಇಲಾಖೆ ಅಥವಾ ಮುಖ್ಯಮಂತ್ರಿಗಳೇ ಬೇಕಾದರೆ ಮಾಡಲಿ. ನಾನು ಅದನ್ನು ಅನಲೈಸ್ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ that may change the direction of the investigation. It can help the accused to go scot free. ಆಸೋಸಿಯೇಷನ್‌ನವರು ಒಂದು ವರದಿ ಕಳಿಸಿರುವ ಹಿನ್ನೆಲೆಯಲ್ಲಿ ನಮಗೆ ಬಂದ ವರ್ತಮಾನದ ಪ್ರಕಾರ when the first set of accused were arrested they were hand cuffed. When they were handcuffed, the police were threatened by some powerful people. ಏಕಪ್ಪ, ಈ ದೊಡ್ಡವರ ಸಹವಾಸ ಎಂದರೆ ಹಿಂದೇಟು ಹಾಕಿದರೆಂಬ ಭಾವನೆ ಬಂದಿದೆ. ಐ ವಿಟ್ನೆಸ್‌ಗಳನ್ನು ಪೆದರಿಸಂತಿದ್ದಾರೆ. There are some persons outside the purview of the accused. ಇದಕ್ಕೆ ಹಿನ್ನೆಲೆ ಕೂಡ ಆ ಸೊಸೈಟಿ ಸೀಜ್ ಮಾಡಿದ್ದು ಇದೆ, He was after the smugglers. He had determined to finish the smugglers. He was ready to sacrifice his life. ಇವತ್ತು ಇಡೀ ಸದನ ಅಂಥಾ ಹುತಾತ್ಮನಿಗೆ ವಂದನೆ ಸಲ್ಲಿಸಬೇಕಾಗಿದೆ. ಏಕೆಂದರೆ ಅಂಥ ಆಫೀಸರ್ಸ್ ಮತ್ತೆ ಹುಟ್ಟಿ ಬರಬೇಕು ಅಂಥವರಿಗೆ ರಕ್ಷಣೆ ಕೊಡಬೇಕಾದ ನೈತಿಕ ಬಲ ಮತ್ತು ಮನೋಬಲವನ್ನು ತಾವು ತೋರ್ಪಡಿಸಬೇಕು. ಈಗ ಅದು ಇದೆಯೋ ಇಲ್ಲವೋ ಎಂದು ಸಂಶಯ ಬಂದಿದೆ. ಇವತ್ತು ಪೋಲೀಸರಿಂದ ಇದು ಆಗುವುದಿಲ್ಲ, ತನಿಖೆ ಸಿಬಿಐ ನವರಿಂದ ಆಗಬೇಕು. ಅರಣ್ಯ ಇಲಾಖೆ ಆಸೋಸಿಯೇಷನ್‌ನವರೂ ಹಾಗೆಂದು ಬೇಡಿಕೆ ಸಲ್ಲಿಸಿದ್ದಾರೆ. because of these circumstances. ಸರಿಯಾಗಿ ಸಿಬಿಡಿ ಮಾಡುವುದಿಲ್ಲ ಎಂದು entrust it to CBI. ಅದನ್ನೇ ನಾವು ಇವತ್ತು ಡಿಮ್ಯಾಂಡ್ ಮಾಡುತ್ತಿದ್ದೇವೆ. ಇದಕ್ಕೆಲ್ಲಾ ಉತ್ತರ ಹೇಳಲಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ನಾನು ಮೊದಲೇ ಹೇಳಿಬಿಡುತ್ತೇನೆ, ನಡುವಧ್ಯೆ ನೀವು ಬೆಲ್ ಹೊಡೆದುಬಿಟ್ಟರೆ ನಾನು ಮಾತಾಡುವುದಕ್ಕೆ ಆಗುವುದಿಲ್ಲ. ಇದಕ್ಕೆಲ್ಲಾ ಯಾರಾರ್ಯಾ ಶಾಮೀಲು ಎಂದು ಲಿಸ್ಟ್ ಕೊಡುತ್ತೇನೆ. ೧೯೮೩ನೇ ಇಸವಿಯಲ್ಲಿ.

ಅಧ್ಯಕ್ಷರು.—ಡಿಬೇಟ್ ಬೇಕಿಲ್ಲ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಗೋಪಾಲ ಮಯ್ಯಂದ ಕಾನಡೆ.—ಇದನ್ನೆಲ್ಲಾ ನಾನು ಮೂವ್ ಮಾಡುತ್ತೇನೆ.

ಅಧ್ಯಕ್ಷರು.—ಈ ರೂಲ್ಸಿನಲ್ಲಿ ಏನಿದೆ ಎಂದರೆ ಅಂತಹ ಹೇಳಿಕೆಯನ್ನು ಕೊಟ್ಟ ತರುವಾಯ, ಅದೇ ಕಾಲದಲ್ಲಿ ಅದರ ಮೇಲೆ ಯಾವುದೇ ಚರ್ಚೆ ಮಾಡತಕ್ಕದ್ದಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯ ಯಾರ ಹೆಸರಿನಲ್ಲಿದೆಯೋ.....

ಶ್ರೀ ಗೋಪಾಲ ಮಯ್ಯಂದ ಕಾನಡೆ.—ಹಿಂದಿನ ಚರಿತ್ರೆಯೆಲ್ಲ ಹೇಳುವುದಿಲ್ಲ ಸ್ವಾಮಿ, ಬರೀ ಕ್ಲಾರಿಫಿಕೇಷನ್ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಪರಾಂ ಕಾನ್‌ಸ್ಟಿಟ್ಯೂಯೆನ್ಸಿಯವರು, ಅವಕಾಶ ಕೊಡಿ.

ಅಧ್ಯಕ್ಷರು.—ನೀವು ಹೊಸಬರು ಇನ್ನೂ ಕಾನಡೆಯವರೇ.

ಶ್ರೀ ಯು. ಭೂಪತಿ.—ಪದೇ ಪದೇ ನೀವು ಹೊಸಬರು ಎಂದು ಹೇಳುತ್ತಿರುತ್ತೀರಿ, ಹಗಲೆಲ್ಲ ಹಾಗೆ ಹೇಳಬೇಡಿ, ನಿಮ್ಮ ಸ್ಥಾನಕ್ಕೆ ನೀವು ಹೇಗೆ ಹೊಸಬರೋ ನಾವೂ ಹಾಗೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಯಾವ್ಯಾವ ಸದಸ್ಯರು ಏನೇನು ಕ್ಲಾರಿಫಿಕೇಷನ್ ಕೇಳಿದ್ದಾರೋ ಅದಕ್ಕೆ ಉತ್ತರ ಕೊಡುತ್ತೇನೆ ಆದಾದ ಮೇಲೆ ಮಾನ್ಯ ಸದಸ್ಯರಾದ ಶ್ರೀ ಕಾನಡೆಯವರು ಇಲ್ಲವೇ ಬೇರೆ ಸದಸ್ಯರು ಕ್ಲಾರಿಫಿಕೇಷನ್ ಕೇಳಲಿ. ಪ್ರಾರಂಭದಲ್ಲಿ ಮಾನ್ಯ ಬಂಗಾರಪ್ಪನವರು ಹೇಳಿದರು ಅವರ ಕ್ಲಾರಿಫಿಕೇಷನ್‌ಗೆ ತಕ್ಷಣ ಉತ್ತರ ಕೊಡಬೇಕೆಂದು. ಆಗ ನಾನು ಹೇಳಿದೆ ೩-೪ ಜನ ಸದಸ್ಯರು ಏನು ಕ್ಲಾರಿಫಿಕೇಷನ್ ಕೇಳುತ್ತಾರೆ ಅದಕ್ಕೆ ಒಟ್ಟಿಗೇ ಕೊಡುತ್ತೇನೆಂದು. ಮೊಟ್ಟ ಮೊದಲನೆಯದಾಗಿ ಒಂದು ವಿಚಾರವನ್ನು ಸ್ಪಷ್ಟ ಮಾಡಲಿಕ್ಕೆ ಬಯಸುತ್ತೇನೆ. ಇದರಲ್ಲಿ ಆ ಪಕ್ಷಕ್ಕೆ ಸೇರಿದವರು ಅಥವಾ ಈ ಪಕ್ಷಕ್ಕೆ ಸೇರಿದಂತಹವರು ಎಂಬ ದೃಷ್ಟಿಯಿಂದ ಸರ್ಕಾರ ನೋಡುವುದಿಲ್ಲ. ಆನೇಕ ವರ್ಷಗಳ ಹಿಂದೆ ನೀಲಕಂಠ ಹೆಗಡೆಯವರು, ಕಾಂಗ್ರೆಸ್ (ಒ) ನಲ್ಲಿದ್ದಂತಹವರು, ಆಗ ಸ್ವಲ್ಪ ಪಂಟ್ಟಿಗೆ ಫಾರೆಸ್ಟ್‌ನಲ್ಲಿ ಸ್ಮಗ್ಲಲ್ ಮಾಡತಕ್ಕಂತಹ ಕೆಲಸದಲ್ಲಿ ಅವರ ಸಂಬಂಧವಿದೆ, ಅವರು ಮಾಡುತ್ತಾರೆಂದು ಗೊತ್ತಾದ ಮೇಲೆ ನಾವು ಅವರಿಗೆ ಪಕ್ಷದಿಂದ ನೋಟೀಸ್ ಕೊಟ್ಟಿದ್ದೂ ಉಂಟು. ಈ ರೀತಿಯ ವ್ಯವಹಾರವಿದ್ದರೆ ಪಕ್ಷದಲ್ಲಿ ಇರಲಿಕ್ಕೆ ನೀವು ನಾಲಾಯಕ್ಕು ಎಂದು ಹೇಳಿದ್ದೇವೆ. ಸ್ಮಗ್ಲರ್ ಅಂದರೆ ಸ್ಮಗ್ಲರ್ರೇ, ಅವರ ಜಾತಿ ಸ್ಮಗ್ಲರ್, ಅವರ ಧರ್ಮ ಸ್ಮಗ್ಲರ್. ಇದರಲ್ಲಿ ಆ ಜಾತಿ ಈ ಜಾತಿ ಆ ಪಕ್ಷದವರು ಈ ಪಕ್ಷದವರು ಎಂಬ ದೃಷ್ಟಿಯಿಂದ ನಾವು ನೋಡುವುದಿಲ್ಲ. ನೀಲಕಂಠ ಹೆಗಡೆಯವರನ್ನು ಏಕೆ ಅರೆಸ್ಟ್ ಮಾಡಲಿಲ್ಲವೆಂದು ಪ್ರಸ್ತಾಪಕ್ಕೆ ಬಂತು. ಮೊದಲನೆಯ ಆರೋಪಿ ನೀಲಕಂಠ ಹೆಗಡೆಯವರ ಮಗ ಬಾಕಿ ಎಲ್ಲರೂ ನೀಲಕಂಠ ಹೆಗಡೆಯವರ ಮನೆಗೆ ಸಂಬಂಧಪಟ್ಟವರು. ಅವರು ಅಲ್ಲಿ ಆ ದಿವಸವಿದ್ದಿದ್ದರೆ ಮ್ಯತ್ತು ಯಾವುದೇ ರೀತಿಯಾದ ಸಂಬಂಧ, ಅಂದರೆ, ಆ ಘಟನೆಗೆ ಅವರ ಸಂಬಂಧ ವಿದ್ದಿದ್ದರೆ ನೀಲಕಂಠ ಹೆಗಡೆಯವರನ್ನು ಅರೆಸ್ಟ್ ಮಾಡದೇ ಹೋಗುತ್ತಿರಲಿಲ್ಲ. ನನಗೆ ಸಿಕ್ಕ ಮಾಹಿತಿ ಪ್ರಕಾರ ನೀಲಕಂಠ ಹೆಗಡೆಯವರು ಶುಶ್ರೂಷೆಗಾಗಿ ಒಂದು ವಾರದಿಂದ ಮಂಣಿಪಾಲಿನಲ್ಲಿದ್ದರು, ಎಂದು ಗೊತ್ತಾಗಿದೆ. ಆ ಟ್ರಕ್‌ನಲ್ಲಿ ಏನು ಮರ ಬಂದಿತ್ತು ಅದರಲ್ಲಿ ಟಿಂಬರ್ ಎಷ್ಟು ಇದೆ ಸೌದೆ ಎಷ್ಟು ಇದೆ ಎಂದು ವಿಚಾರ ಮಾಡಿದಾಗ ಸೌದೆ ಹೆಚ್ಚು ಅದರಲ್ಲಿತ್ತು ಎಂದು ತಿಳಿಯಿತು. ಅದರ ಬಗ್ಗೆ ವರದಿಯೂ ಇದೆ. ಮಾನ್ಯ ಬಂಗಾರಪ್ಪನವರು ಒಂದು ಕಡೆ ಹೇಳಿದರು ನೀಲಕಂಠ ಹೆಗಡೆಯವರು ನನಗೆ ಸಂಬಂಧಿಕರಾಗುತ್ತಾರೆಂದು. ಹಾಗೆ ನೋಡಿದರೆ ಎಲ್ಲಾ ಹೆಗಡೆಯವರು ನನಗೆ ಸಂಬಂಧಿಕರಾಗುತ್ತಾರೆ. ನಿಜವಾಗಿ ನೋಡಿದರೆ ನೀಲಕಂಠ ಹೆಗಡೆಯವರ ಸಂಬಂಧಕ್ಕಿಂತ ಅರವಿಂದ ಹೆಗಡೆಯವರ ಸಂಬಂಧ ಹೆಚ್ಚಾಗಿದೆ ಅವರು ಅತ್ಯಂತ ಉತ್ತಮವಾದಂತಪ ಆಫೀಸರ್ ಆಗಿದ್ದು ಉತ್ಸಾಹ ಹೆಚ್ಚು ಇತ್ತು. ತಾನು ಒಪ್ಪಿ ಕೊಂಡ ಕೆಲಸವನ್ನು ಜೀವದ ಹಂಗು ತೊರೆದು ಮಾಡತಕ್ಕಂತಹ ಶಕ್ತಿ ಇತ್ತು ಅವರ ವಯಸ್ಸು ಸುಮಾರು ೩೨ ಇರಬಹುದು. ಅವರ ಮದುವೆಯಾಗಿ ಕೂಡ ಬಹಳ ದಿವಸ ಆಗಿಲ್ಲ ಮೊನ್ನೆ ಮೊನ್ನೆ ಮದುವೆಯಾಯಿತು ಇದು ನಿಜವಾಗಿ ಒಂದು ದುರಂತ. ಆದರೆ ಇದರಲ್ಲಿ ಯಾರನ್ನಾದರೂ ನಾವು ಪ್ರೊಟೆಕ್ಟ್ ಮಾಡುತ್ತೇವೆ ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಪೇಪರ್‌ನಲ್ಲಿ ಬಂದಿರ ಕೃಂಥಾದ್ದನ್ನು ನಾನು ಇಲ್ಲಿ ಓದುತ್ತೇನೆ. ''ಪಬ್ಲಿಕ್ ಪ್ರಾಸಿಕ್ಯೂಟರ್ ರವರು ಏಪ್ರಿಲ್ ೩೦ರಂದು ಹೈಕೋರ್ಟಿಗೆ ಒಂದು ಆಕ್ಷೇಪಣೆಯನ್ನು ಸಲ್ಲಿಸಿ ಅರ್ಜಿದಾರರುಗಳು ಶ್ರೀಮಂತರಾಗಿದ್ದು ಪ್ರಭಾವೀ ಶಕ್ತಿಗಳ ಗಿದ್ದಾರೆ ಅವರು ಜಾಮೀನಿನ ಮೇಲೆ ಬಿಡುಗಡೆ ಹೊಂದಿದಲ್ಲಿ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಶಂಕೆ ಇದೆಯಲ್ಲದೆ, ಆರೋಪಿಗಳು ತಲೆ ಮರೆಸಿಕೊಳ್ಳುವ ಸಂಭವ

ಕೂಡ ಇದೆ ಇದರಿಂದ ತನಿಖೆಗೆ ಅಡಚಣೆಯಾಗುತ್ತದೆ. ಪ್ರಕರಣ ನಡೆದಾಗಿನಿಂದ ಈ ನಾಲ್ವರೂ ತಲೆ ಮರೆಸಿಕೊಂಡಿರುವುದೇ ಅವರು ಬಂಧನವನ್ನು ತಪ್ಪಿಸಿಕೊಳ್ಳುವರೆಂಬುದಕ್ಕೆ ಸಾಕ್ಷಿಯಾಗಿದೆ. ಅವರು ಈ ಹಂತದಲ್ಲಿ ಹೊರಬಂದಲ್ಲಿ ಸಾಕ್ಷಿಗಳ ಜೀವಕ್ಕೆ ಅಪಾಯವಿದೆ. ಇವರಿಗೆ ನಿರೀಕ್ಷಣಾ ಜಾಮೀನು ಕೊಡಕೂಡದು'' ಎಂದು ಸರ್ಕಾರದ ಪರವಾಗಿ ನಮ್ಮ ಪ್ರಾಸಿಕ್ಯೂಟರ್‌ರವರು ವಾದಿಸಿದ್ದಾರೆ. ಇನ್ನೇನು ಮಾಡಬೇಕು ? ತಲೆ ಮರೆಸಿಕೊಂಡವರು ಅವರೇ ಬಂದು ಹಾಜರಾಗುತ್ತಾರೆಯೇ ? ನಂತರ ಅವರನ್ನು ಅರೆಸ್ಟ್ ಮಾಡಿದ್ದಾರೆ ಆ ನಾಲ್ಕು ಜನ ತಲೆ ಮರೆಸಿಕೊಂಡು ಬೆಂಗಳೂರು, ಕಾರವಾರ, ಬಾಂಬೆಯಲ್ಲಿದ್ದಾರೋ ಯಾರಿಗೆ ಗೊತ್ತು ?

ಶ್ರೀ ಎಸ್. ಬಂಗಾರಪ್ಪ.—ಅಲ್ಲಿಯೇ ಓಡಾಡುತ್ತಿರತಕ್ಕಂಥಾದ್ದು ಗೊತ್ತಿಲ್ಲವೇ ? ಸಿರಸಿ ಲೀಡರ್‌ಗಳು ಎಲ್ಲರ ಹತ್ತಿರ ಓಡಾಡುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಲೀಡರ್ ಇಲ್ಲ, ಯಾವುದೂ ಇಲ್ಲ. ಆದಂತಹ ವಿಚಾರವನ್ನು ಹೇಳಲಿಕ್ಕೆ ಬಯಸಿದ್ದೇನೆ. ಈ ಮನೆಯನ್ನು ಕೋರ್ಟ್ ಆಗಿ ಪರಿವರ್ತನೆ ಮಾಡುವುದು ಸರಿಯಲ್ಲ, ಕೋರ್ಟ್ ಅಲ್ಲಿದೆ. ಇದರಲ್ಲಿ ಯಾವುದೇ ಶಂಕೆಗೆ ಆಸ್ಪದಪಿಲ್ಲವೆಂದು ಹೇಳಲಿಕ್ಕೆ ಬಯಸುತ್ತೇನೆ.

ಯಾವುದೇ ರೀತಿಯ ಪ್ರಭಾವಕ್ಕೂ ಸರ್ಕಾರ ಒಳಗಾಗುವುದಿಲ್ಲ. ಯಾರಿಗೂ ಪ್ರೊಟೆಕ್ಷನ್ ಕೊಡ ತಕ್ಕಂಥ ವಿಚಾರ ಆನ್‌ಡ್ಯು ಪ್ರೊಟೆಕ್ಷನ್ ಕೊಡತಕ್ಕಂಥ ವಿಚಾರ ಇಲ್ಲ. ಡಿ. ಎಫ್. ಓ. ರವರು ನೀಲ ಕಂಠ ಹೆಗಡೆಯವರೊಡನೆ ಶಾಮೀಲಾಗಿದ್ದಾರೆ ಎಂದು ಹೇಳಿದರು, ಇದೇ ಡಿ.ಎಫ್.ಓ. ಕೆಲವು ವರ್ಷಗಳ ಹಿಂದೆ ನೀಲಕಂಠ ಹೆಗಡೆಯವರ ಟಿಂಬರನ್ನು ಸೀಸ್ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆಮೇಲೆ ಏನಾಯಿತು ?

ಶ್ರೀ ಎನ್. ಎಂ. ಅಡ್ಯಂತಾಯ.—ಆಗ ಯಾವ ಸರ್ಕಾರ ಅಧಿಕಾರದಲ್ಲಿತ್ತು ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಎರಡು ಮೂರು ವರ್ಷಗಳ ಹಿಂದೆ ಇದೇ ಡಿ. ಎಫ್. ಓ. ಅವರೇ ನೀಲಕಂಠ ಹೆಗಡೆಗೆ ಸಂಬಂಧಪಟ್ಟಂಥ ಟಿಂಬರಿನ ಟ್ರುಕ್ಕನ್ನು ಸೀಸ್ ಮಾಡಿದ್ದಾರೆ. ಆದ್ದರಿಂದ ಈ ಡಿ.ಎಫ್.ಓ. ಗೂ ಅವರಿಗೂ ಸಂಬಂಧ ಇಲ್ಲ. If there is any lapse on the part of the D F. O. or any dereliction of duty on his part, we will not hesitate to take action against him.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈಗಲಾದರೂ ವಿವರವನ್ನು ತರಿಸಿ ನೋಡಿ.

ಶ್ರೀ ರಾಮಕೃಷ್ಣ ಹೆಗಡೆ. —ಅವರು ಮಾಡಿದಂಥ ಸಾಹಸಕ್ಕಾಗಿ ಅದನ್ನು ಮೆಚ್ಚಿ ಸರ್ಕಾರ ಅವರಿಗೆ ಒಂದು ಪಾರಿತೋಷಕವನ್ನು ಕೊಡಬೇಕು ಎಂದು ಯೋಚನೆ ಮಾಡಿದ್ದೇವೆ.

ಅಧ್ಯಕ್ಷರು.—ಈಗ ಸಿಸಿಳಿ. ಮಾನ್ಯ ಚಿಕ್ಕಬೋರಯ್ಯನವರೇ ಕೇಳಿ.

ಶ್ರೀ ಗೋಪಾಲ ಮಂಕಾಂದ ಕಾನಡೆ.—ಅಧ್ಯಕ್ಷರೇ, ಏನು ಇದು.

MR. SPEAKER —The matter has been closed.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ದಯವಿಟ್ಟು ಕೇಳಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಮೊದಲ ಪ್ರಶ್ನೆಗೆ ಉತ್ತರ ಕೊಡುತ್ತೇನೆ, ನಂತರ ಕೇಳುವ ಪ್ರಶ್ನೆಗೆ ಆಮೇಲೆ ಉತ್ತರ ಕೊಡುತ್ತೇನೆ ಎಂದು ಅವರೇ ಹೇಳಬೇಕಾದರೆ ನೀವೇನು ಚಿಕ್ಕಬೋರಯ್ಯನವರನ್ನು ಕರೆಯುವುದು.

(ಗೊಂದಲ)

ಅಧ್ಯಕ್ಷರು.—ಅವರು ಕೊಟ್ಟ ಉತ್ತರದಲ್ಲಿ ನೀವು ಸಾಟಿಸ್‌ಫೈ ಆಗಿದ್ದೀರಿ, ಅವರು ಆಗಿಲ್ಲ ಆಯಿತು ಕೇಳಿ ಕಾನಡೆಯವರೇ.

SRI M. VEERAPPA MOILY.—We are not satisfied. ನಾವು ಕೇಳಬೇಕಾಗು ತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿನ ಅಸೋಸಿಯೇಷನ್‌ರವರೇ ಇದನ್ನು ಸಿ. ಬಿ. ಐ. ಗೆ ರೆಫರ್ ಮಾಡಿ ಎಂದು ಹೇಳಿದ್ದಾರೆ, ಅದರ ಬಗ್ಗೆ ಏನು ಹೇಳುತ್ತೀರೆಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವನ್ನೇ ಕೊಡಲಿಲ್ಲ. ಇದೇ ಪ್ರಶ್ನೆಯನ್ನು ಇವರೂ ಕೇಳಿದರು, ನಮ್ಮ ನಾಯಕರೂ ಕೇಳಿದರು, ನಾನು ಕೂಡಾ ಕೇಳಿದ್ದೇನೆ. ಇದನ್ನು ಅಸೋಸಿಯೇಷನ್‌ನವರೇ ಕೇಳುತ್ತಿದ್ದಾರೆ, ನಾವು ಕೇಳುತ್ತಿಲ್ಲ. ಅದನ್ನು ನೀವು ಸಿ. ಬಿ ಐ.ಗೆ ರೆಫರ್ ಮಾಡುತ್ತೀರಾ ಎಂದು ಕೇಳಿದ್ದೆವು. ಅದಕ್ಕೆ ಉತ್ತರವೇ ಬರಲಿಲ್ಲ. ಸಿರಸಿಗೆ ಸಂಬಂಧಪಟ್ಟ ಹಾಗೆ ಕಾನಡಿಯವರು ಕೂಡ ಪ್ರಶ್ನೆಯನ್ನು ಕೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಕೇಸನ್ನು ಸಿ.ಬಿ.ಐ.ಗೆ ಒಪ್ಪಿಸುವುದಕ್ಕೆ ನಾವು ತಯಾರಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಏಕೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ನಮ್ಮ ಇಷ್ಟ. That is the discretion of this Government.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕಾನಡಿಯವರೇ ನೀವು ಕೇಳಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, I am on a point of order.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರಲ್ಲಿ, ನಮ್ಮಗಿಂತ ಹೆಚ್ಚು ಹೆಗಡೆಗಳು ಇದ್ದಾರೆ,

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ಹೇಳುತ್ತೇನೆ.

x x x x x

(ಗೊಂದಲ)

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಏನು ಹೇಳಿದ್ದಾರೆ ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಮಾನ್ಯ ಬಂಗಾರಪ್ಪನವರೇ, ಅಡ್ಯಂತಾಯ ನಿಮ್ಮ ಪಾರ್ಟಿಗೆ ಒಳ್ಳೆಯ ಪೆಸರು ತರುವುದಿಲ್ಲ. ಇದು ಕ್ರಾಲಿಂಗ್ ಆಟೆನ್‌ಷನ್. ಇದಕ್ಕೆ ಅವರು ಸಿಗ್ನೇಚರ್ ಮಾಡಿಲ್ಲ. Sri N. M. Adyanthaya will bring a bad name to your Congress Party.

(ಗೊಂದಲ)

೧-೫೦ ಪಿ. ಎಂ.

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿದ್ದಕ್ಕೆ ಇವರು ತಿರುಗಿ ಹೇಳಿದ್ದಾರೆ.

---

x x x ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲದಕ್ಕೂ ನೀವು ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ ಇದು ಸರಿಯಲ್ಲ,

ಶ್ರೀ ಎನ್. ಎಂ. ಅಡ್ಯಂತಾಯ.—ಅವರು ಹೇಳುವುದನ್ನು.....

ಅಧ್ಯಕ್ಷರು.—ಸತ್ತವರು ಅವರ ಸಂಬಂಧಿಕರು ಎಂದು ಹೇಳುತ್ತಾರೆ. ಏನು ಮಾತನಾಡುತ್ತೀರಿ ನೀವು ? ಮಾನ್ಯ ಕಾನಡೆಯವರೆ ನೀವು ಮಾತನಾಡಿ,

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈ ರೀತಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಮಾನ್ಯ ಕಾನಡೆ ಅವರೇ ನೀವು ಕೇಳಿ. ಮಾನ್ಯ ರಾಮಪ್ಪನವರೇ ನೀವು ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಅರವಿಂದ ಹೆಗಡೆ ಅವರ ಕೊಲೆಗೆ ಕಾರಣ ಈ ಡಿ.ಎಫ್.ಓ ಎಂಬುದು ನನ್ನ ಅನಿಸಿಕೆ. ಏಕೆಂದರೆ.....

ಅಧ್ಯಕ್ಷರು.—ಏಕೆಂದರೆ ಬೇಡ, ಪ್ರಶ್ನೆ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಏನಿದು ?

ಶ್ರೀ ಗೋಪಾಲ ಮುಂಕುಂದ ಕಾನಡೆ.—ಅಧ್ಯಕ್ಷರೇ, ಹಿಂದೆ ಡಿ. ಎಫ್. ಓ. ವಿಚಾರವಾಗಿ ಈ ಸದನದಲ್ಲಿ ನಾಲ್ಕೈದು ಬಾರಿ ಕೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಕೂಡ ಹೇಳಿದ್ದೇನೆ ಆರ್. ವಿ. ದೇಶಪಾಂಡೆ ಅವರ ಹತ್ತಿರ ಹೇಳಿದ್ದೇನೆ, ಡಿ. ಎಫ್. ಓ. ಏನೇನು ಮಾಡಿದರು, ಎಷ್ಟು ಮಂದಿಗೆ ಹೊಡೆದರು, ಎಷ್ಟು ಮಂದಿಯನ್ನು ಬೂಟಿನಲ್ಲಿ ಹೊಡೆದರು ಎಂಬುದನ್ನು ಹೇಳಿದ್ದೇನೆ, ಪ್ರತಿಯೊಂದನ್ನೂ ಆರ್. ವಿ. ದೇಶಪಾಂಡೆ ಅವರ ಹತ್ತಿರ ಹೇಳಿದ್ದೇನೆ. ಅವರ ಮುಂದೆ ಡಿ.ಎಫ್.ಓ. ಕರೆಯಿಸಿ ಹೇಳಿದ್ದೇನೆ. ಅವನ್ನು ಯಾವಾಗಲೂ ಸ್ಮಗ್ಲಿಂಗ್‌ನವರಿಗೆ ಸಪೋರ್ಟ್. ಅವನು ಏತಕ್ಕೆ ಸಪೋರ್ಟ್ ಎಂದರೆ ಬಕ್ಕಲ ಸೊಸೈಟಿ ಅಂತ ಬಂದಿದೆ,

ಅಧ್ಯಕ್ಷರು.—ಭಾಷಣ ಬೇಡ್ರಿ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ವಿಷಯಕ್ಕೆ ಬರುತ್ತೇನೆ. ಬಕ್ಕಲ ಸೊಸೈಟಿಗೆ ಡಿ.ಎಫ್.ಓ. ನೀಲಕಂಠ ಹೆಗಡೆ ಎಲ್ಲಾ ಕೂಡಿ ಉಪ್ಪರಿಗೆ ಹಣ್ಣಿನ ಸಿಪ್ಪೆಯನ್ನು ಹುಳಿ ಸಿಪ್ಪೆಯನ್ನು ಕೇರಳಕ್ಕೆ ಒಯ್ಯುತ್ತಾರೆ. ಅದನ್ನು ಟೆಂಡರ್ ಕರೆಯದೇ ಅವರೇ ಒಂದೊಂದು ಲಕ್ಷಕ್ಕೆ ಕೊಟ್ಟು ಎರಡೆರಡು ಲಕ್ಷ ಪಾಲು ಹಂಚಿಕೊಳ್ಳುತ್ತಿದ್ದರು. ಅದನ್ನು ೧೯೮೬ನೇ ಇಸವಿಯಲ್ಲಿ ಗಲಾಟೆ ಮಾಡಿ ೧೯೮೭ನೇ ಇಸವಿಯಲ್ಲಿ ಟೆಂಡರ್ ಕರೆಯಬೇಕು ಎಂದು ಅಸೆಂಬ್ಲಿಯಲ್ಲಿ ಹೇಳಿದಾಗ ಟೆಂಡರ್ ಕರೆದಿದ್ದಾರೆ. ಆಗ ಅದು ನಾಲ್ಕು ಲಕ್ಷ ರೂಪಾಯಿಗೆ ಹೋಗಿದೆ. ಈ ಇನ್‌ಫರ್ಮೇಷನ್ ಕೊಟ್ಟವರು ಅರವಿಂದ ಹೆಗಡೆಯವರು. ಆಮೇಲೆ ಮಾರ್ಚ್ ೧೬ನೇ ತಾರೀಖಿಗೆ ಬಕ್ಕಲ ಸೊಸೈಟಿಗೆ ಸಂಬಂಧಪಟ್ಟ ಎಂ. ಎಂ. ಹೆಗಡೆಯವರು, ಅವರು ಆ ಸೊಸೈಟಿಗೆ ಅಧ್ಯಕ್ಷರು, ಅವರ ಲಾರಿ ನಂಬರ್ ಎಂ. ಎಫ್. ಎಚ್. ೪೩೫೭ ಅವನ್ನು ಈ ಅರವಿಂದ ಹೆಗಡೆಯವರು ಹಿಡಿದರು, ಸ್ಮಗ್ಲಿಂಗ್ ಮಾಡುವ ಹೊತ್ತಿಗೆ ಲಾರಿ ಹಿಡಿದಾಗ ಡಿ. ಎಫ್. ಓ. ಅದನ್ನು ಬಿಡಬೇಕು ಎಂದು ಒತ್ತಾಯ ಮಾಡಿದರು. ಅರವಿಂದ ಹೆಗಡೆಯವರು ಅವರ ಮಾತು ಕೇಳಲಿಲ್ಲ, ಲಾರಿ ಬಿಡಲಿಲ್ಲ. ಆದ್ದರಿಂದ ಡಿ.ಎಫ್.ಓ. ಅರವಿಂದ ಹೆಗಡೆಯವರ ಮೇಲೆ ಕಣ್ಣು ಇಟ್ಟಿದ್ದರು. ಮಿನಿಸ್ಟರ್ ದೇಶಪಾಂಡೆಯವರ ಊರಿನಲ್ಲಿ ೨೪೭೦ ಮರ ಕಳ್ಳಸಾಗಾಣಿಕೆಯಾಗಿದೆ. ಅದಕ್ಕೆ ಇದೇ ಡಿ. ಎಫ್. ಓ. ಕಾರಣ. ಈಗ ಒಂದು ತಿಂಗಳ ಹಿಂದೆ ಉಪ್ಪರಿಗೆ ಹಣ್ಣಿನ ಸಿಪ್ಪೆ ಬಗ್ಗೆ ಕೇಳಿದ್ದಕ್ಕೆ ೧೯೮೫-೮೬ ಮತ್ತು ೧೯೮೬-೮೭ನೇ ಇಸವಿಯಲ್ಲಿ ಎಷ್ಟಕ್ಕೆ ಟೆಂಡರ್ ಆಗಿದೆ ಎಂದು ಕೇಳಿದಾಗ, ೧೯ಲಕ್ಷ ರೂಪಾಯಿ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಮಿಸ್‌ಗೈಡ್ ಮಾಡಿದ್ದಾರೆ. ಅದು ನಾಲ್ಕು ಲಕ್ಷಕ್ಕೆ.....

ಅಧ್ಯಕ್ಷರು.—ಡಿ. ಎಫ್. ಓ. ಮೇಲೆ ಅಲಿಗೇಷನ್ ಇದ್ದರೆ ಕೊಡಿ, ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೂ ಹೇಳುತ್ತಿರುವುದು, ಯಾವರೀತಿ ರಿಲೆವೆಂಟ್ ಆಗುತ್ತದೆ ? ಡಿ.ಎಫ್.ಓ. ಮೇಲೆ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಚೀಫ್ ಮಿನಿಸ್ಟರ್ ಹೇಳಿದ್ದಾರೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಡಿ.ಎಫ್.ಓ,ನೇ ಕಾರಣಕರ್ತರು ಅದಕ್ಕೆ ಈ ವಿಚಾರದಲ್ಲಿ ಹಿಂದಿನಿಂದಲೂ ಸರ್ಕಾರದ ವಿರುದ್ಧ ಕೆಲಸ ಮಾಡಿದ್ದಾರೆ.

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿಸುತ್ತಾರೆ.

ಶ್ರೀ ಗೋಪಾಲ ಮಂಕಂದ ಕಾನಡೆ.—ಏನು ಮಾಡಿಸುತ್ತಾರ್ರೀ? ನಾನಂ ಉಪವಾಸ ಕುಳಿತಿದ್ದೆ. ಸರ್ಕಾರದವರಂ ಏನೂ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಒಂದು ಲಕ್ಷಕ್ಕಿಂತ ಜಾಸ್ತಿ ಉಪ್ಪರಿಗೆಸಿಪ್ಪೆ ಮಾರಾಟ ಮಾಡಿದ್ದರೆ ಅವರನ್ನು ಸಸ್ಪೆಂಡ್ ಮಾಡಬೇಕು. ಅದು ಇಲ್ಲದಿದ್ದರೆ ನಾನು ಸದನದ ಒಳಗಡೆ ಬರುವುದಿಲ್ಲ. ಇದಕ್ಕೆ ಉತ್ತರ ಕೊಡಲಿ. ಎರಡು ಲಕ್ಷಕ್ಕಿಂತ ಮೇಲೆ ಆಗದಿದ್ದರೆ ನಾನು ಸದನಕ್ಕೆ ಬರುವುದಿಲ್ಲ. ಅದೇನಾದರೂ ಆಗಿದ್ದರೆ ಅವರನ್ನು ಸಸ್ಪೆಂಡ್ ಮಾಡಬೇಕು. ಇಂಥ ಕೇಸುಗಳು ಬಹಳ ಇವೆ. ಮುಚ್ಚಿಟ್ಟುಕೊಳ್ಳುತ್ತಾರೆ ಇದೊಂದೇ ಅಲ್ಲ. ನೀಲಕಂಠ ಹೆಗಡೆಯವರ ಲಾರಿಯನ್ನು ೧೯೫೩ನೇ ಇಸವಿಯಲ್ಲಿ ರಾಮಯ್ಯ ಎಂಬ ಡಿ. ಎಫ್. ಒ. ಹಿಡಿದಿದ್ದಕ್ಕೆ ಇದೇ ಸರ್ಕಾರ ಅವರನ್ನು ಟ್ರಾನ್ಸ್‌ಫರ್ ಮಾಡಿದೆ. ಇದರಿಂದ ಅರವಿಂದ ಹೆಗಡೆಯಂಪರ ಕೊಲೆ ಆಗಲಿಕ್ಕೆ ಡಿ. ಎಫ್. ಒ. ನೇ ಕಾರಣ. ಆ ದಿವಸ ಅರವಿಂದ ಹೆಗಡೆಯವರಿಗೆ ಆಕ್ಸಿಡೆಂಟ್ ಆಗಿ ಅವರನ್ನು ಹೊತ್ತಿಕೊಂಡು ಬರುವ ಹೊತ್ತಿಗೆ ಡಿ.ಎಫ್.ಒ. ಬರುವುದಕ್ಕೆ ಹೇಳಿದರೆ ಡಿ. ಎಫ್. ಒ. ಬರಲೇ ಇಲ್ಲ. ಹಿಂದೆ ಅರವಿಂದ ಹೆಗಡೆಯವರನ್ನು ಕೊಲ್ಲಬೇಕೆಂ ಎಂದು ಬಕ್ಕಲ ಸೊಸೈಟಿಯವರು ಪ್ರಯತ್ನ ಮಾಡಿದ್ದರಂ. ಅದು ಪೇಪರ್‌ನಲ್ಲಿ ಬಂದಿದೆ. ಇಂಥದ್ದಕ್ಕೆ ಡಿ.ಎಫ್.ಒ. ಸಪೋರ್ಟ್ ಕೊಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕಾರಣ.

ಅಧ್ಯಕ್ಷರು.—ಏನಾಗಬೇಕು ಹೇಳಿ.

ಶ್ರೀ ಗೋಪಾಲ ಮುಕಂದ ಕಾನಡೆ.—ರಾಮಕೃಷ್ಣ ಹೆಗಡೆಯವರು ನಮ್ಮ ಊರಿನವರು. ಯಾರು ಯಾರು ಏನು ಮಾಡುತ್ತಾರೆ ಎಂಬುದೆಲ್ಲಾ ಅವರಿಗೆ ಗೊತ್ತಿದೆ. ಅವರಿಗೆ ೧೦೦ ಸಾರಿ ವಿನಂತಿ ಮಾಡಿಕೊಂಡಿದ್ದೇನೆ. ಮೂರು ದಿವಸ ಉಪವಾಸ ಕುಳಿತಿದ್ದೇನೆ.

ಅಧ್ಯಕ್ಷರು.—ಏನಾಗಬೇಕು ಕೇಳಿರಿ ?

ಅಧ್ಯಕ್ಷರು.—ನೀವು ಭಾಷಣ ಮಾಡದೆ ಕ್ಲಾರಿಫಿಕೇಶನ್ ಕೇಳಿ?

ಶ್ರೀ ಗೋಪಾಲ ಮುಂಕುಂದ ಕಾನಡೆ.— ಈ ಡಿ.ಎಫ್.ಒ.ಅವರು ಎಷ್ಟು ಜನರಿಗೆ ಹೊಡೆದಿದ್ದಾರೆ ಎಂಬುದನ್ನು ಬೇಕಾದರೆ ಕೇಳಿ ತಿಳಿದುಕೊಳ್ಳಿ. ಒಟ್ಟಿನಲ್ಲಿ ಈ ಕೇಸ್‌ನ್ನು ತನಿಖೆ ಮಾಡುವುದಕ್ಕೆ ಕರ್ನಾಟಕ ಸರ್ಕಾರದಿಂದ ಆಗುವುದಿಲ್ಲ. ಮುಖ್ಯಮಂತ್ರಿಗಳು ಇದನ್ನು ತನಿಖೆ ಮಾಡಲು ಹೆದರುತಾರೆ. ಆದ್ದರಿಂದ ಇದು ಸಿ ಬಿ ಐ-ನವರಿಂದಲೇ ತನಿಖೆಯಾಗಬೇಕೆಂದು ಹೇಳುತ್ತೇನೆ. ಯಾರು ಈ ಒಂದು ಕಟ್ಟೆ ಕೆಲಸ ಮಾಡಿದ್ದಾರೆ, ಅವರಿಗೆ ಶಿಕ್ಷೆ ಆಗಬೇಕೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನಡೆ ಅವರು ಈ ಸಂಬಂಧದಲ್ಲಿ ನನಗೆ ಒಂದು ಪತ್ರ ಬರೆದಿದ್ದು ನಿಜ. ಅಲ್ಲಿನ ಡಿ.ಎಫ್.ಓ. ವಿರುದ್ಧ ಇವರು ಕೆಲವು ದೂರುಗಳನ್ನು ನನಗೆ ಕೊಟ್ಟರು. ನಾನು ಆ ದೂರುಗಳನ್ನು ತನಿಖೆ ಮಾಡಿಸುವುದಕ್ಕೆ ಚೀಫ್-ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರಿಗೆ ಕಳುಹಿಸಿಕೊಟ್ಟೆ. ಅವರು ಈ ದೂರುಗಳ ಬಗ್ಗೆ ತನಿಖೆ ಮಾಡಿದ ನಂತರ ಈ ದೂರುಗಳಲ್ಲಿ ಸತ್ಯವಿಲ್ಲ. ಎಂದು ವರದಿ ಕೊಟ್ಟಿದ್ದಾರೆ. ಆದರೆ ಒಂದು ಮಾತು ನಿಜ. ಏನೆಂದರೆ, ಮಾನ್ಯ ಕಾನಡೆ ಅವರಿಗೂ ಮತ್ತು ಈ ಡಿ.ಎಫ್.ಒ. ಅವರಿಗೂ ಮೊದಲಿನಿಂದಲೂ ಸರಿಯಿಲ್ಲ. ಇದು ಮಾನ್ಯ ಸದಸ್ಯರಿಗೂ ಗೊತ್ತುಂಟು. ಅದಕ್ಕೆ ಯಾವ ಕಾರಣವೋ ನನಗೆ ಗೊತ್ತಿಲ್ಲ. ಮಾನ್ಯ ಪಾಂಡೆ ಅವರು ಪೋಲೀಸರಿಗೆ ಒಂದು ಕಂಪ್ಲೇಂಟ್ ಕೊಟ್ಟಿದ್ದಾರೆ. ಮಾನ್ಯ ಕಾನಡೆ ಅವರು ಅಸಾಲ್ಟ್ ಮಾಡುವುದಕ್ಕೆ ಬಂದಿದ್ದರೆಂದು ದೂರು ಕೊಟ್ಟಿದ್ದಾರೆ. ಈ ಪಿರ್ಯಾದಿ ದಾಖಲಾಗಿದೆ, ಈ ಕೇಸ್ ವಿಚಾರದಲ್ಲಿ ಶ್ರೀ ಪಾಂಡೆ ಅವರಿಗಾಗಲೀ ಅಥವಾ ಮತ್ತೊಬ್ಬರಿಗೇ ಆಗಲೀ, ಯಾರಿಗೂ ಅನ್‌ಫೇರ್ ಪ್ರೊಡಕ್ಷನ್ ಕೊಡುವ ಪ್ರಶ್ನೆಯೇ ಇಲ್ಲ ಕಾಯಿದೆ ಪ್ರಕಾರ ಈ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳಲು ನಾನು ಹಿಂದೆ ಮುಂದೆ ನೋಡುವುದಿಲ್ಲ.

ಅಧ್ಯಕ್ಷರು.— ಈಗ ನಿಯಮ ೩೫೪ರ ಪ್ರಕಾರ ಶ್ರೀ ಚಿಕ್ಕಬೋರಯ್ಯನವರು ತಮ್ಮ ಹೆಸರಿನಲ್ಲಿರುವ ವಿಷಯವನ್ನು ಪ್ರಸ್ತಾಪ ಮಾಡಬಹುದು.